# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1618

2) ಸದಸ್ಯರ ಹೆಸರು : ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 18-03-2026

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಮೀನುಗಾರಿಕೆ ಇಲಾಖೆ ವತಿಯಿಂದ ಬೆಂಗಳೂರು ನಗರ ಜಿಲ್ಲೆಗೆ ಸೇರಿದ ಎಷ್ಟು ಕೆರೆಗಳಲ್ಲಿ ಮೀನು ಸಾಕಾಣಿಕೆ ಮಾಡಲಾಗುತ್ತಿದೆ; | ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 206 ಕೆರೆಗಳಿದ್ದು, ಅವುಗಳಲ್ಲಿ 149 ಕೆರೆಗಳಲ್ಲಿ ಮೀನು ಸಾಕಾಣಿಕೆ ಮಾಡಲಾಗುತ್ತಿದೆ. |
| ಆ) | ಬೆಂಗಳೂರು ನಗರ ಜಿಲ್ಲೆಯ ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಯಾವ ಯಾವ ಕೆರೆಗಳಲ್ಲಿ ಮೀನು ಸಾಕಾಣಿಕೆ ಮಾಡಲಾಗುತ್ತಿದೆ; (ಸಂಪೂರ್ಣ ವಿವರ ಒದಗಿಸುವುದು) | ಬೆಂಗಳೂರು ನಗರ ಜಿಲ್ಲೆಯ ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಕೆಳಕಂಡ ಕೆರೆ / ಜಲಾಶಯಗಳಲ್ಲಿ ಮೀನು ಸಾಕಾಣಿಕೆ ಮಾಡಲಾಗುತ್ತಿದೆ.<br>1. ಮಾರಗೊಂಡನಹಳ್ಳಿ ಕೆರೆ ,<br>2. ಭೀಮನಕುಪ್ಪೆ ಕೆರೆ<br>3. ಗಾಂಧಿನಗರ ವಳಗೆರೆಹಳ್ಳಿ ಕೆರೆ,<br>4. ರಾಮಸಂದ್ರ ಹಿರೇಕೆರೆ,<br>5. ಅಗರಹೊಸ ಕೆರೆ,<br>6. ಎಂ.ಕೆ.ಪುರ ಕೆರೆ,<br>7. ಗುಳಕಮಲೆ ಹೊಸಕೆರೆ.<br>8. ತಿಪ್ಪಗೊಂಡನ ಹಳ್ಳಿ ಜಲಾಶಯ (ಪರವಾನಗಿ ಮುಖಾಂತರ) |
| ಇ) | ಬೆಂಗಳೂರು ನಗರ ಜಿಲ್ಲೆಯಲ್ಲಿ ಮೀನು ಸಾಕಾಣಿಕೆ ಮಾಡಲು ಯಾವ ಯಾವ ಕೆರೆಗಳನ್ನು ಟೆಂಡರ್ ಮೂಲಕ ನೀಡಲಾಗಿದೆ; (ಮಾಹಿತಿ ಒದಗಿಸುವುದು) | ಬೆಂಗಳೂರು ನಗರ ಜಿಲ್ಲೆಯಲ್ಲಿ 2025-26ನೇ ಸಾಲಿನಲ್ಲಿ ಟೆಂಡರ್ ಮೂಲಕ ಮೀನು ಸಾಕಾಣಿಕೆ ಮಾಡಲು ನೀಡಿರುವ ಕೆರೆಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಈ) | ಮೀನುಗಾರಿಕೆ ಇಲಾಖೆಯಿಂದ ಸಾರ್ವಜನಿಕರಿಗೆ ನೀಡುವ ಮೂಲಭೂತ ಸೌಲಭ್ಯಗಳ ವಿವರವಾದ ಮಾಹಿತಿಯನ್ನು ಸರ್ಕಾರದ ಆದೇಶಗಳೊಂದಿಗೆ ಒದಗಿಸುವುದು; | 2025-26ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯಿಂದ ಸಾರ್ವಜನಿಕರಿಗೆ ನೀಡುವ ಮೂಲಭೂತ ಸೌಲಭ್ಯಗಳು ಮತ್ತು ಯೋಜನೆಗಳ ಮಾಹಿತಿಯನ್ನು ಸರ್ಕಾರದ ಆದೇಶಗಳೊಂದಿಗೆ **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಉ) | ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದಂತೆ ಇಲಾಖಾ ವತಿಯಿಂದ ಕಳೆದ ಎರಡು ವರ್ಷಗಳಲ್ಲಿ ನೀಡಿರುವ ಮೂಲಭೂತ ಸೌಕರ್ಯಗಳ ವಿವರ ಒದಗಿಸುವುದು? | ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದಂತೆ ಇಲಾಖಾ ವತಿಯಿಂದ ಕಳೆದ ಎರಡು ವರ್ಷಗಳಲ್ಲಿ ಯಾವುದೇ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವುದಿಲ್ಲ. |

ಸಂಖ್ಯೆ: ಪಸಂಮೀ ಇ-67 ಮೀಇಯೋ 2026

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ [illegible] ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:

1618 ರ. **ಅನುಬಂಧ-1**

| ಕ್ರ. ಸಂ | ತಾಲ್ಲೂಕು | ಕೆರೆಯ ಹೆಸರು | ಗ್ರಾಮದ ಹೆಸರು | ಇ-ಟೆಂಡರ್ ಕಂ ಹರಾಜು ಆದಾಯ |
|---|---|---|---|---|
| | ಬೆಂಗಳೂರು ಉತ್ತರ | | | |
| 1 | | ಆಂದ್ರಹಳ್ಳಿ ಕೆರೆ | ಆಂದ್ರಹಳ್ಳಿ | 7840 |
| 2 | | ವಡೇರಹಳ್ಳಿ ಕೆರೆ | ವಡೇರಹಳ್ಳಿ | 68039 |
| 3 | | ನರಸೀಪುರ-26 ಕೆರೆ | ನರಸೀಪುರ | 21496 |
| 4 | | ಐವರಕಂಡಪುರ ಕೆರೆ | ಐವರಕಂಡಪುರ | 19758 |
| 5 | | ಕಾಕೋಳು ಕೆರೆ | ಕಾಕೋಳು | 866889 |
| 6 | | ನೆಲಗದರನಹಳ್ಳಿ ಕೆರೆ | ನೆಲಗದರನಹಳ್ಳಿ | 23925 |
| 7 | | ಲಿಂಗಧೀರನಹಳ್ಳಿ ಕೆರೆ | ಲಿಂಗಧೀರನಹಳ್ಳಿ | 3975 |
| 8 | | ಆಲೂರು ಕೆರೆ | ಆಲೂರು | 238023 |
| 9 | | ಸೊಂಡೆಕೊಪ್ಪ ಕೆರೆ | ಸೊಂಡೆಕೊಪ್ಪ | 564503 |
| 10 | | ಮಳೆಕೆರೆದೊಡ್ಡಕೆರೆ | ಮಳೆಕೆರೆ | 13230 |
| 11 | | ಕಮ್ಮಗೊಂಡನಹಳ್ಳಿ ಕೆರೆ | ಕಮ್ಮಗೊಂಡನಹಳ್ಳಿ | 42253 |
| 12 | | ನರಸೀಪುರ-20 ಕೆರೆ | ನರಸೀಪುರ | 15959 |
| | ಬೆಂಗಳೂರು ಪೂರ್ವ | | | |
| 13 | | ಸೊಣ್ಣೇನಹಳ್ಳಿಕೆರೆ | ಸೊಣ್ಣೇನಹಳ್ಳಿ | 121551 |
| 14 | | ಬಸವನಪುರಕೆರೆ | ಬಸವನಪುರ | 11576 |
| 15 | | ಕೆ ಆರ್ ಪುರ ಸಂತೆಕೆರೆ | ಕೆ ಆರ್ ಪುರ | 118078 |
| 16 | | ಪಟ್ಟಂದೂರುಕೆರೆ | ಪಟ್ಟಂದೂರು | 7166 |
| 17 | | ಬೈರಸಂದ್ರಕೆರೆ | ಬೈರಸಂದ್ರ | 23887 |
| 18 | | ವಿಜಿನಾಪುರ ಕೆರೆ | ಕೌದೇನಹಳ್ಳಿ | 13964 |
| 19 | | ಹೂಡಿ ಗಿಡ್ಡನಕೆರೆ | ಹೂಡಿ | 66151 |
| 20 | | ಪಣತ್ತೂರುಕೆರೆ | ಪಣತ್ತೂರು | 157500 |
| 21 | | ದೇವರಬೀಚನಹಳ್ಳಿಕೆರೆ | ದೇವರಬೀಚನಹಳ್ಳಿ | 158550 |
| 22 | | ಚೆಳ್ಳಕೆರೆ | ಹೆಣ್ಣೂರು | 211049 |
| 23 | | ವರಣಾಸಿಕೆರೆ | ವರಣಾಸಿ | 95550 |
| 24 | | ಮಹದೇವಪುರ ಕೆರೆ-2 | ಮಹದೇವಪುರ | 156600 |
| 25 | | ಗುಂಜೂರು ಹೊಸಕೆರೆ | ಗುಂಜೂರು | 36466 |
| | ಬೆಂಗಳೂರು ದಕ್ಷಿಣ | | | |
| 26 | | ಹರಳಕುಂಟೆ ಸೋಮಸುಂದರಪಾಳ್ಯ | ಹರಳಕುಂಟೆ ಸೋಮಸುಂದರಪಾಳ್ಯ | 158200 |
| 27 | | ನಾಗನಾಥಪುರಕೆರೆ | ನಾಗನಾಥಪುರ | 90000 |
| 28 | | ಸೋಂಪುರಕೆರೆ | ಸೋಂಪುರ | 171000 |

| | | | | |
|---|---|---|---|---|
| 29 | | ವಡೇರಹಳ್ಳಿಕೆರೆ | ವಡೇರಹಳ್ಳಿ | 149000 |
| 30 | | ತಲಘಟ್ಟಪುರಕೆರೆ | ತಲಘಟ್ಟಪುರ | 117000 |
| 31 | | ಅಂಬಲೀಪುರ ಮೇಲಿನ ಕೆರೆ | ಅಂಬಲೀಪುರ | 77417 |
| 32 | | ಸುಬೇದಾರನಪಾಳ್ಯ ಕೆರೆ | ಸುಬೇದಾರನಪಾಳ್ಯ | 37014 |
| 33 | | ಎಂ.ಕೆ.ಪುರ ಕೆರೆ | ಎಂ.ಕೆ.ಪುರ | 242550 |
| 34 | | ಜರಗನಹಳ್ಳಿಕೆರೆ | ಜರಗನಹಳ್ಳಿ | 58800 |
| 35 | | ವಳಗೆರೆಕೆರೆ | ವಳಗೆರೆ | 9029 |
| 36 | | ಅಂಜನಾಪುರ ಕೆರೆ | ಆವಲಹಳ್ಳಿ | 229950 |
| 37 | | ರಾಮಸಂದ್ರ ಹಿರೇ ಕೆರೆ | ರಾಮಸಂದ್ರ | 651000 |
| 38 | | ದೀಪಾಂಜಲಿ ಕೆರೆ | ದೀಪಾಂಜಲಿ ನಗರ | 13425 |
| 39 | | ಇಬ್ಬಲೂರು ಕೆರೆ | ಇಬ್ಬಲೂರು | 169155 |
| 40 | | ಅಂಬಲಿಪುರ ಕೆರೆ | ಬೆರಟೇನ ಅಗ್ರಹಾರ | 40517 |
| 41 | | ಕಾಳೇಅಗ್ರಹಾರ ಕೆರೆ | ಕಾಳೇಅಗ್ರಹಾರ | 63987 |
| | **ಆನೇಕಲ್** | | | |
| 42 | | ಹುಲಿಮಂಗಲ ಕೆರೆ | ಹುಲಿಮಂಗಲ | 206758 |
| 43 | | ಹುಸ್ಕೂರು ಕೆರೆ | ಹುಸ್ಕೂರು | 666221 |
| 44 | | ಆನೇಕಲ್ ದೊಡ್ಡ ಕೆರೆ | ಆನೇಕಲ್ | 324135 |
| 45 | | ಪಂಡಿತನ ಅಗ್ರಹಾರ ಕೆರೆ | ಪಂಡಿತನ ಅಗ್ರಹಾರ | 34740 |
| 46 | | ಸಜ್ಜಾಪುರ ದೊಡ್ಡ ಕೆರೆ | ಸಜ್ಜಾಪುರ | 24461 |
| 47 | | ಮಾಯಸಂದ್ರ ಕೆರೆ | ಮಾಯಸಂದ್ರ | 198220 |
| 48 | | ಬಿದರಗೆರೆ ಕೆರೆ | ಬಿದರಗೆರೆ | 17399 |
| 49 | | ಅತ್ತಿಬೆಲೆ ಜೂಜುವಾಡಿ ಕೆರೆ | ಅತ್ತಿಬೆಲೆ | 27925 |
| 50 | | ಹೀಲಲಿಗೆ ತಿಪ್ಪಯ್ಯನ ಕೆರೆ | ಹೀಲಲಿಗೆ | 3508 |
| 51 | | ಕೂಡ್ಲು ಕೆರೆ | ಕೂಡ್ಲು | 700231 |
| 52 | | ಬೊಮ್ಮಂಡಹಳ್ಳಿ ಕೆರೆ | ಬೊಮ್ಮಂಡಹಳ್ಳಿ | 140431 |
| 53 | | ಮೈಸೂರಮ್ಮನದೊಡ್ಡಿ ಕೆರೆ | ಮೈಸೂರಮ್ಮನದೊಡ್ಡಿ | 70286 |
| 54 | | ಜಿಗಣಿ ಕೆರೆ | ಜಿಗಣಿ | 1148655 |
| 55 | | ಅತ್ತಿಕೆರೆ ಬೊಮ್ಮಸಂದ್ರ ಇಂಡಸ್ಟ್ರಿಯಲ್ ಕೆರೆ | ಕಿತ್ತಗಾನಹಳ್ಳಿ | 126137 |
| ಒಟ್ಟು | | | | 9031129 |

ಮೀನುಗಾರಿಕೆ ನಿರ್ದೇಶಕರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎನ್. ಜವರಾಯಿಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1618 ರ

# ಅನುಬಂಧ-2

## ಮೀನುಗಾರಿಕೆ ಇಲಾಖೆಯಿಂದ ಸಾರ್ವಜನಿಕರಿಗೆ ನೀಡುವ ಮೂಲಭೂತ ಸೌಲಭ್ಯಗಳ ಮತ್ತು ಯೋಜನೆಗಳ (ಕಾಮಗಾರಿಗಳು) ವಿವರ

| ಕ್ರಮ ಸಂಖ್ಯೆ | ಯೋಜನೆಯ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ಮರವಂತೆ ಮೀನುಗಾರಿಕೆ ಹೊರ ಬಂದರಿನ 2 ನೇ ಹಂತದ ಅಭಿವೃದ್ಧಿ ಕಾಮಗಾರಿ | 8500.00 |
| 2 | ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತದ ವಿಸ್ತರಣೆ ಯೋಜನೆಯ ಉಳಿಕೆ ಕಾಮಗಾರಿ | 4950.00 |
| 3 | ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕಾ ಬಂದರು ನಿರ್ಮಾಣ ಕಾಮಗಾರಿ | 20912.78 |
| 4 | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ಸುಸಜ್ಜಿತ ಮೀನುಗಾರಿಕೆ ಹೊರ ಬಂದರುನಿ ರ್ಮಾಣ ಕಾಮಗಾರಿ | 39850.00 |
| 5 | ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಮಂಗಳೂರು ಮೀನುಗಾರಿಕೆ ಬಂದರಿನ ಆಧುನೀಕರಣ ಕಾಮಗಾರಿ | 3,747.10 |
| 6 | ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಮಲ್ಪೆ ಮೀನುಗಾರಿಕೆ ಬಂದರಿನ ಆಧುನೀಕರಣ ಕಾಮಗಾರಿ | 1,252.00 |
| 7 | ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಗಂಗೊಳ್ಳಿ ಮೀನುಗಾರಿಕೆ ಬಂದರಿನ ಆಧುನೀಕರಣ ಕಾಮಗಾರಿ | 2,218.00 |
| 8 | ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಆಮದಳ್ಳಿ ಮೀನುಗಾರಿಕೆ ಬಂದರಿನಲ್ಲಿ ಹೂಳೆತ್ತುವ ಕಾಮಗಾರಿ | 561.00 |
| 9 | ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಬೇಲಿಕೇರಿ-ಹಾರವಾಡ ಮೀನುಗಾರಿಕೆ ಬಂದರಿನಲ್ಲಿ ಹೂಳೆತ್ತುವ ಕಾಮಗಾರಿ | 414.08 |
| 10 | ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ತದಡಿ ಮೀನುಗಾರಿಕೆ ಬಂದರಿನಲ್ಲಿ ಹೂಳೆತ್ತುವ ಕಾಮಗಾರಿ | 265.59 |
| 11 | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಅಳ್ವೆಕೋಡಿ ಮೀನುಗಾರಿಕೆ ಇಳಿದಾಣ ಕೇಂದ್ರದಲ್ಲಿ ಮಹಿಳೆಯರ ಶೌಚಾಲಯ ನಿರ್ಮಾಣ | 75.00 |
| 12 | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಮಾವಿನಕುರ್ವೆ ಬಂದರಿನಲ್ಲಿ ಮಹಿಳಾವಿಶ್ರಾಂತಿ ಕೊಠಡಿ ನಿರ್ಮಾಣ ಕಾಮಗಾರಿ | 82.00 |
| 13 | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ತೆಂಗಿನಗುಂಡಿ ಮೀನುಗಾರಿಕೆ ಇಳಿದಾಣ ಕೇಂದ್ರದಲ್ಲಿ ಬಲೆ ನೇಯುವ ಶೆಡ್ ಬದಲಾಯಿಸಿ ಅಂಗಡಿ ಮಳಿಗೆಗಳನ್ನು ನಿರ್ಮಿಸುವ ಕಾಮಗಾರಿ. | 46.00 |
| 14 | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಮಾವಿನಕುರ್ವೆ ಮೀನುಗಾರಿಕೆ ಬಂದರಿನಲ್ಲಿ ಕಾಂಕ್ರೀಟ ವಾಲ್ ನಿರ್ಮಾಣ ಕಾಮಗಾರಿ | 15.00 |
| 15 | ಭಟ್ಕಳ ತಾಲ್ಲೂಕಿನ ಅಳ್ವೆಕೋಡಿ ಮೀನುಗಾರಿಕೆ ಇಳಿದಾಣ ಕೇಂದ್ರದಲ್ಲಿ ಬೋಟುಗಳನ್ನು ನಿಲ್ಲಿಸಲು ಇರುವ ಬೊಲಾರ್ಡ್ ದುರಸ್ತಿ ಕಾಮಗಾರಿ. | 25.00 |

| | | |
|---|---|---|
| 16 | ಕಾರವಾರ ತಾಲ್ಲೂಕಿನ ಬೈತಕೋಲ್ ಮೀನುಗಾರಿಕಾ ಬಂದರಿನ ಬೋಟುಗಳ ನಿಲುಗಡೆಗಾಗಿ ಬೋಟ್‌ನ ಪಾಂಗಗಳನ್ನು ಕಟ್ಟಲು ಬೋಲಾರ್ಡ್ಸ್‌ಗಳನ್ನು ಅಳವಡಿಸುವುದು | 20.00 |
| 17 | ಉಡುಪಿ ಜಿಲ್ಲೆಯಕುಂದಾಪುರ ತಾಲ್ಲೂಕಿನ ಗಂಗೊಳ್ಳಿಯಲ್ಲಿ ಉತ್ತರ ಭಾಗದ ಬ್ರೇಕ್‌ವಾಟರ್ (ಅಲೆತಡೆಯ) ನಿರ್ವಹಣೆ. | 10.00 |
| 18 | ಉಡುಪಿಜಿಲ್ಲೆಯ ಬೈಂದೂರು ತಾಲ್ಲೂಕಿನ ಕೊಡೇರಿ ಪ್ರದೇಶದಲ್ಲಿ ದಕ್ಷಿಣ ಭಾಗದ ಬ್ರೇಕ್‌ವಾಟರ್ (ಅಲೆತಡೆಯ) ನಿರ್ವಹಣೆ. | 10.00 |
| 19 | ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಕೊಡೇರಿ ಪ್ರದೇಶದಲ್ಲಿ ಉತ್ತರ ಭಾಗದ ಬ್ರೇಕ್‌ವಾಟರ್ (ಅಲೆತಡೆಯ)ನಿರ್ವಹಣೆ. | 10.00 |
| 20 | ಉಡುಪಿ ಜಿಲ್ಲೆ ಕೋಡಿ ಬೆಂಗ್ರೆ ಬಂದರಿನ ಹರಾಜು ಮಳಿಗೆ ಪ್ರಾಂಗಣದ ಮೇಲ್ಹಾವಣಿ ದುರಸ್ತಿ ಮಾಡಿ ಹೊಸದಾಗಿ ಅಳವಡಿಸುವ ಕಾಮಗಾರಿ | 59.00 |
| 21 | ಕಾರವಾರ ತಾಲೂಕಿನ ಬೈತ್‌ಖೋಲ್ ಮೀನುಗಾರಿಕಾ ಬಂದರಿನ ಸುತ್ತ ಮುತ್ತ ಮಳೆ ನೀರು ಹರಿದು ಹೋಗುವಂತೆ ಮಳೆ ನೀರು ಚರಂಡಿ ನಿರ್ಮಾಣ | 20.00 |
| 22 | ಕಾರವಾರ ತಾಲೂಕಿನ ಬೈತ್‌ಖೋಲ್ ಮೀನುಗಾರಿಕಾ ಬಂದರಿನಲ್ಲಿರುವ ಹಳೆಯ ಮಹಿಳಾ ವಿಶ್ರಾಂತಿ ಗೃಹ ದುರಸ್ತಿ | 12.00 |
| 23 | ಅಂಕೋಲಾ ತಾಲ್ಲೂಕಿನ ಬೇಲೇಕೇರಿ ಮೀನುಗಾರಿಕಾ ಬಂದರಿನಲ್ಲಿ ಮೀನುಗಾರಿಕಾ ಬೋಟುಗಳನ್ನು ನಿಲ್ಲಿಸಲು ಕಟ್ಟುವ ಕಾಂಕ್ರೀಟ್ ಬೋಲಾರ್ಡ್ಸ್ (Bollards) ದುರಸ್ತಿ ಕಾಮಗಾರಿ. | 5.00 |

ಮೀನುಗಾರಿಕೆ ನಿರ್ದೇಶಕರು

11/3/2016 11/3/16

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತದ ವಿಸ್ತರಣೆ ಯೋಜನೆಯ ಉಳಿಕೆ ಕಾಮಗಾರಿಗಳನ್ನು ರೂ.49.50 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳುವ ಸಂಬಂಧ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:- (1) ಆದೇಶ ಸಂಖ್ಯೆ: ಪಸಂಮೀ/146/ಮೀಇಯೋ/2010 ದಿನಾಂಕ: 24-09-2010.

(2) ಆದೇಶ ಸಂಖ್ಯೆ: ಪಸಂಮೀ/ಇ-205/ಮೀಇಯೋ/2020, ದಿನಾಂಕ: 15-05-2021 ಮತ್ತು 13-09-2021 ರ ಸೇರ್ಪಡೆ ಆದೇಶ.

(3) ಮೀನುಗಾರಿಕೆ ನಿರ್ದೇಶಕರ ಏಕ ಕಡತ ಪತ್ರ ಸಂಖ್ಯೆ: ಸಂಖ್ಯೆ: DOF-TECH0HAR/94/2020, ದಿನಾಂಕ: 03-12-2022 ಮತ್ತು 26-05-2023.

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, ಮಂಗಳೂರು ತಾಲ್ಲೂಕಿನ ಹಳೇ ಮೀನುಗಾರಿಕಾ ಬಂದರಿನ 3ನೇ ಹಂತದ ಮೀನುಗಾರಿಕಾ ಬಂದರಿನ ವಿಸ್ತರಣೆ ಕಾಮಗಾರಿಯನ್ನು ಕೇಂದ್ರದ ಪಾಲು ರೂ.43.20 ಕೋಟಿಗಳು (ಶೇ.75) ಮತ್ತು ರಾಜ್ಯದ ಪಾಲು ರೂ.14.40 ಕೋಟಿ (ಶೇ.25) ಹೀಗೆ ಒಟ್ಟು ರೂ.57.60 ಕೋಟಿಗಳ ವೆಚ್ಚಕ್ಕೆ ಸೀಮಿತಗೊಳಿಸಿ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತದ ಅಭಿವೃದ್ಧಿ ವಿಸ್ತರಣೆಯ ಅವಶ್ಯಕ ಉಳಿಕೆ ಕಾಮಗಾರಿಯನ್ನು ರೂ.22.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರ ಏಕ ಕಡತ ಮತ್ತು ಪತ್ರಗಳಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮೀನುಗಾರಿಕಾ ಬಂದರಿನ 3ನೇ ಹಂತದ ಕಾಮಗಾರಿಯನ್ನು ಕೇಂದ್ರ ಪುರಸ್ಕೃತ ಯೋಜನೆಯಡಿ ರೂ.5760.00 ಲಕ್ಷ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಕೇಂದ್ರ ಸರ್ಕಾರದ ಆದೇಶ ದಿನಾಂಕ: 20-09-2010 ರಲ್ಲಿ ಮತ್ತು ರಾಜ್ಯ ಸರ್ಕಾರದ ಆದೇಶ ದಿನಾಂಕ: 24-09-2010 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ಕಾಮಗಾರಿಯ ಅಂದಾಜು ವೆಚ್ಚವು ಶೇ.75ರಷ್ಟು ಕೇಂದ್ರ ಸರ್ಕಾರದ ಪಾಲು (ರೂ.4320.00 ಲಕ್ಷ) ಹಾಗೂ ಶೇ.25ರಷ್ಟು ರಾಜ್ಯ ಸರ್ಕಾರದ (ರೂ1440.00 ಲಕ್ಷ) ಪಾಲು ಆಗಿರುತ್ತದೆ. ಸದರಿ ಕಾಮಗಾರಿಯನ್ನು ನಿಯಮಾನುಸಾರ ಟೆಂಡರ್ ಮೂಲಕ ಬಂದರು ಇಲಾಖೆಯ ಬಂದರು ಮತ್ತು ಮೀನುಗಾರಿಕೆ ವಿಭಾಗ ಕಛೇರಿಯ ಗುತ್ತಿಗೆ ಕರಾರು ಸಂ: 28/2011-12 ರಂತೆ ಗುತ್ತಿಗೆದಾರರಾದ ಮೆ|| ಯೋಜಕಾ ಇಂಡಿಯಾ ಪ್ರೈ ಲಿಮಿಟೆಡ್, ಮಂಗಳೂರು



Generated from eOffice by [illegible] on 17/05/2024 04:32 PM

ಇವರೊಂದಿಗೆ ರೂ.6064.71 ಲಕ್ಷಗಳಿಗೆ ಗುತ್ತಿಗೆ ಕರಾರು ನಿರ್ವಹಿಸಲಾಗಿತ್ತು. 2015ನೇ ಸಾಲಿನವರೆಗೆ ರೂ.5750.00 ಲಕ್ಷಗಳಷ್ಟು ಆರ್ಥಿಕ ಪ್ರಗತಿ ಸಾಧಿಸಲಾಗಿತ್ತು. ಕಾಮಗಾರಿಯ ಪ್ರಗತಿಯ ಸಂದರ್ಭದಲ್ಲಿ, ತಾಂತ್ರಿಕ ಸಂಸ್ಥೆಯ ಶಿಫಾರಸ್ಸಿನನ್ವಯ ಹಾಗೂ ಮೀನುಗಾರರ ಬೇಡಿಕೆಯನುಸಾರ ವಿವಿಧ ರಾಜ್ಯ ಮಟ್ಟದ ಸಭೆಗಳಲ್ಲಿ ಕೈಗೊಂಡ ನಿರ್ಣಯಗಳಂತೆ ಪರಿಷ್ಕರಿಸಲಾದ ವಿನ್ಯಾಸ ಹಾಗೂ ಆರ್ಥಿಕ ಇಲಾಖೆಯ ಆದೇಶದನ್ವಯ ಲೆಕ್ಕ ಹೊಂದಾಣಿಕೆ (price adjustment) ಕಾರಣಗಳಿಂದಾಗಿ ಮೂಲ ಅಂದಾಜಿನಲ್ಲಿ ಪ್ರಸ್ತಾಪಿಸಿರುವ ಎಲ್ಲಾ ಕಂಪೋನೆಂಟ್‌ಗಳನ್ನು ನಿರ್ವಹಿಸಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಏತನ್ಮಧ್ಯೆ, ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತದ ಕಾಮಗಾರಿಯು ಪ್ರಗತಿಯಲ್ಲಿದ್ದ ಸಂದರ್ಭದಲ್ಲಿ ರಾಷ್ಟ್ರೀಯ ಹಸಿರು ನ್ಯಾಯಪೀಠ, ನವದೆಹಲಿ ಇಲ್ಲಿ ಹೂಡಿದ್ದ ದಾವೆಗೆ ಸಂಬಂಧಿಸಿದಂತೆ ನೀಡಿದ ತೀರ್ಪಿನಂತೆ ಸುಮಾರು 02 ವರ್ಷಗಳಷ್ಟು ಕಾಲ ಕಾಮಗಾರಿಯಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಬೇಕಾಗಿದ್ದ ಕಾರಣ ಕಾಮಗಾರಿಯನ್ನು ಅನಿವಾರ್ಯವಾಗಿ ಸ್ಥಗಿತಗೊಳಿಸಲಾಗಿರುತ್ತದೆ. ರಾಷ್ಟ್ರೀಯ ಹಸಿರು ನ್ಯಾಯಪೀಠ (NGT), ನವದೆಹಲಿ ಪೀಠವು ದಿನಾಂಕ: 03-05-2016ರ ಅಂತಿಮ ಆದೇಶದಲ್ಲಿ ಕ್ರೀಕ್ ಭಾಗವನ್ನು ಪೂರ್ಣಗೊಳಿಸಿ ನ್ಯಾಯ ಪೀಠಕ್ಕೆ ವರದಿಯನ್ನು ಸಲ್ಲಿಸಲು ಸೂಚಿಸಿರುವುದರಿಂದ ಮತ್ತು ಮಂಗಳೂರು ಮೀನುಗಾರಿಕಾ ಬಂದರಿನ 3ನೇ ಹಂತದಲ್ಲಿ ಮೀನುಗಾರಿಕೆ ಚಟುವಟಿಕೆಗಳನ್ನು ಪ್ರಾರಂಭಿಸಲು ಅಗತ್ಯವಿರುವ ಕಂಪೋನೆಂಟ್‌ಗಳನ್ನು ಪೂರ್ಣಗೊಳಿಸಿ ಬಂದರನ್ನು ಕಾರ್ಯಾಚರಣೆಗೊಳಿಸುವುದು ಅಗತ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕೆ ವಿಭಾಗ, ಉಡುಪಿ ಇವರು ತಯಾರಿಸಿದ್ದ ರೂ.22.00 ಕೋಟಿಗಳ ಅಂದಾಜು ಪಟ್ಟಿಗೆ ಸಚಿವ ಸಂಪುಟದ ನಿರ್ಣಯ ಪ್ರಕರಣ ಸಂಖ್ಯೆ: ಸಿ/146/2021 ರಲ್ಲಿ ಅನುಮೋದನೆ ನೀಡಿರುವಂತೆ ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-205/ಮೀಇಯೋ/2020, ದಿನಾಂಕ: 15-05-2021 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಕೇಂದ್ರ ಪುರಸ್ಕೃತ ಯೋಜನೆಯಡಿ ಪ್ರಾರಂಭಿಸಲಾದ ರೂ.5760.00 ಲಕ್ಷಗಳ ಮೊತ್ತದ ಮಂಜೂರಾದ ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತದ ಕಾಮಗಾರಿಯ ಟೆಂಡರ್ ಕರಾರನ್ನು ಮುಕ್ತಾಯಗೊಳಿಸದೇ ಉಳಿಕೆ ಕಾಮಗಾರಿಗೆ ಟೆಂಡರ್ ಕರೆಯಲು ಅವಕಾಶವಿಲ್ಲದ ಕಾರಣ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿರುವುದಿಲ್ಲ. ಪ್ರಸ್ತುತ, ಮಂಗಳೂರು ಮೀನುಗಾರಿಕಾ ಬಂದರಿನ 3ನೇ ಹಂತದ ಕಾಮಗಾರಿಯ ಗುತ್ತಿಗೆದಾರರಾದ ಮೆ|| ಯೋಜಕಾ ಇಂಡಿಯಾ ಪ್ರೈ ಲಿ., ಇವರಿಗೆ ವಹಿಸಲಾಗಿದ್ದ ಟೆಂಡರ್ ಅನ್ನು ದಿನಾಂಕ: 17-02-2023 ರ ಆದೇಶದಲ್ಲಿ ಮುಕ್ತಾಯಗೊಳಿಸಿ ಆದೇಶಿಸಲಾಗಿರುತ್ತದೆ.

ಮೇಲಿನಂತೆ ತಾಂತ್ರಿಕ ತೊಡಕುಗಳಿಂದ ರೂ.22.00 ಕೋಟಿಗಳ ಉಳಿಕೆ ಕಾಮಗಾರಿಗಳನ್ನು ಪ್ರಾರಂಭಿಸಲು ಸಾಧ್ಯವಾಗದ ಕಾರಣ ಕೇಂದ್ರ ಸರ್ಕಾರದಿಂದ ಮಂಜೂರಾದ ಸದರಿ



Generated from eOffice by [illegible] on 17/05/2024 04:32 PM

ಕಾಮಗಾರಿಯ ಮೂಲ ಅಂದಾಜಿನ ಬಹುತೇಕ ಕಂಪೋನೆಂಟ್‌ಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ 11 ಕಂಪೋನೆಂಟ್‌ಗಳು ಸೇರಿದಂತೆ ಒಟ್ಟು 21 **ಕಂಪೋನೆಂಟ್ ಗಳನ್ನು ರೂ.49.50 ಕೋಟಿಗಳ ಪರಿಷ್ಕೃತ ಅಂದಾಜಿನಲ್ಲಿ ಅಳವಡಿಸ**ಲಾಗಿದ್ದರಿಂದ, ಅಂದಾಜು ಮೊತ್ತದಲ್ಲಿ ಹೆಚ್ಚಳವಾಗಿದ್ದು, ವಿವರಗಳು ಕೆಳಗಿನಂತೆ ನೀಡಿರುತ್ತಾರೆ.

| **ಕ್ರ. ಸಂ** | **ವಿವರಗಳು** | **ಮೊತ್ತ (ರೂ.ಕೋಟಿ)** |
|---|---|---|
| 1. | ವಿವಿಧ ಕಂಪೋನೆಂಟ್ ಗಳಿಗೆ ಅಂದಾಜು ಮೊತ್ತ | 35.46 |
| 2. | 18% ಜಿ.ಎಸ್.ಟಿ (ಕ್ರ.ಸಂ 1 ರ ಮೊತ್ತಕ್ಕೆ) | 6.38 |
| 3. | 18% ಜಿ.ಎಸ್.ಟಿ ಸೇರಿ ಒಟ್ಟು ಅಂದಾಜು ಮೊತ್ತ | 41.84 |
| 4. | 12% ಸೆಂಟೇಜ್ ಚಾರ್ಜ್ (ಕ್ರ.ಸಂ 3 ರ ಮೊತ್ತಕ್ಕೆ) | 5.02 |
| 5. | 1% Price adjustment (ಕ್ರ.ಸಂ 1 ರ ಮೊತ್ತಕ್ಕೆ) | 0.35 |
| 6. | ವಿದ್ಯುತ್, ಚರಂಡಿ, ನೀರಿನ ಸೌಲಭ್ಯ ಮತ್ತು ಇತರೆ ವಿವಿಧ ಖರ್ಚುಗಳು | 2.28 |
| | **ಒಟ್ಟು ಅಂದಾಜು ಮೊತ್ತ** | **49.49 (ರೂ.49.50 ಕೋಟಿ)** |

2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ಅಗತ್ಯವಾದ 11 ಕಂಪೋನೆಂಟ್‌ಗಳಿಗೆ ಸಂಬಂಧಿಸಿದ ರೂ.22.00 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿತ್ತು. ಇದೇ ಕಂಪೋನೆಂಟ್‌ಗಳನ್ನು 2022-23ನೇ ಸಾಲಿನ ದರಪಟ್ಟಿಯಂತೆ ತಯಾರಿಸಿದಾಗ ಅಂದಾಜು ವೆಚ್ಚದಲ್ಲಿ ಶೇ.25ರಷ್ಟು ಹೆಚ್ಚಳವಾಗಿರುತ್ತದೆ. ಹಾಗೆಯೇ ಮೂಲ ಅಂದಾಜಿನ 11 ಕಂಪೋನೆಂಟ್‌ಗಳು ಸೇರಿದಂತೆ ಒಟ್ಟು 21 ಕಂಪೋನೆಂಟ್‌ಗಳನ್ನು ಕೈಗೊಳ್ಳಲು ರೂ.35.46 ಕೋಟಿಗಳಾಗಿರುತ್ತದೆ. ಪ್ರಸ್ತುತ ಚಾಲ್ತಿಯಲ್ಲಿರುವ ಶೇ.18ರಷ್ಟು ಜಿ.ಎಸ್.ಟಿ. ದರಗಳಂತೆ ರೂ.35.46 ಕೋಟಿಗಳಿಗೆ ರೂ.6.38 ಕೋಟಿ ಜಿ.ಎಸ್.ಟಿ. ದರವಾಗಿರುತ್ತದೆ.

ಮುಂದುವರೆದು, ದಿನಾಂಕ: 01-04-2022 ರಿಂದ ಬಂದರು ಇಲಾಖೆಯು ಕರ್ನಾಟಕ ಜಲಸಾರಿಗೆ ಮಂಡಳಿಯಾಗಿದ್ದು, ಬಂದರು ಕಾಮಗಾರಿಗಳನ್ನು ಸದರಿ ಮಂಡಳಿಯ ಮೂಲಕವೇ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಸದರಿ ಮಂಡಳಿಯು ಅನ್ಯ ಇಲಾಖೆ ಕಾಮಗಾರಿಗಳಿಗೆ ಶೇ.12ರಷ್ಟು ಸೆಂಟೇಜ್ ಚಾರ್ಜನ್ನು ಪಡೆಯುವ ಕ್ರಮ ಜಾರಿಯಲ್ಲಿರುತ್ತದೆ. ಶೇ.18 ರಷ್ಟು ಜಿ.ಎಸ್.ಟಿ. ಸೇರಿದ ಅಂದಾಜು ಮೊತ್ತ ರೂ.41.85 ಕೋಟಿಗಳಿಗೆ ಶೇ.12 ಸೆಂಟೇಜ್ ಚಾರ್ಜ್ ರೂ.5.02 ಕೋಟಿಗಳಾಗಿರುತ್ತದೆ. ಈ ಪೈಕಿ ವಿದ್ಯುತ್ ಸರಬರಾಜು, ಚರಂಡಿ ಕಾಮಗಾರಿಗಳು ಹಾಗೂ ಇತರೆ ಸೌಲಭ್ಯಗಳಿಗೆ ಇಡುಗಂಟು ರೂಪದಲ್ಲಿ ಒಟ್ಟು ರೂ.2.28 ಕೋಟಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಹೀಗೆ ಒಟ್ಟು ರೂ.49.50 ಕೋಟಿಗಳ ಮೊತ್ತದ ಉಳಿಕೆ



Generated from eOffice by [illegible] on 17/05/2024 04:32 PM

ಕಾಮಗಾರಿಗಳಿಗೆ ತಯಾರಿಸಲಾದ ಪರಿಷ್ಕೃತ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ವಿವರಗಳನ್ನು ಸೇರಿಸಲಾಗಿದೆ ಎಂದು ತಿಳಿಸಿರುತ್ತಾರೆ.

**ಮಂಗಳೂರು ಮೀನುಗಾರಿಕಾ ಬಂದರಿನ 3ನೇ ಹಂತದ ವಿಸ್ತರಣೆ ಯೋಜನೆಯ ಉಳಿಕೆ ಕಾಮಗಾರಿ**

**Abstract of Cost Estimate**

**ಅಂದಾಜು ಮೊತ್ತ ರೂ.49.50 ಕೋಟಿಗಳು**

| No. | Component Name | Amount |
|---|---|---|
| 1. | Dredging and Disposal | 1,14,93,328.00 |
| 2. | Revetment and Pitching | 43,42,002.00 |
| 3. | Quay (RCC 'D' wall / Pile Jetty) | 8,87,73,313.00 |
| 4. | Traffic Area and Surfacing | |
| | Double Lane | 5,87,99,917.00 |
| | Single Lane | 1,02,51,196.00 |
| | WBM Roads/Surfaces | 70,12,402.00 |
| | Concrete Surface | 3,53,49,457.00 |
| 5. | Fish Landing & Auction hall | 5,48,96,458.00 |
| 6. | Fisherman Gear Sheds | 36,87,740.00 |
| 7. | Net Mending Sheds | 97,66,563.00 |
| 8. | Fishermen Rest Sheds | 93,32,454.00 |
| 9. | Restaurant | 66,90,645..00 |
| 10. | RC Sloping Hard (3nos.) | 2,13,55,388.00 |
| 11. | Compound Wall | 1,15,17,193.00 |
| 12. | Public Toilet Block | 53,77,878.00 |
| 13. | Security House with Gate | 36,29,462.00 |
| 14. | Fresh Water Storage Supply/Distribution with OHT | 1,03,49,684.00 |
| 15. | RCC Box Culvert | 20,21,069.00 |
| | **Total-A=** | **35,46,46,149.00** |
| | **Add 18% for GST on A=** | 6,38,36,307.00 |
| | **Total-B=** | **41,84,82,456.00** |

Add 12% for Centage Charges for KMB on B= 5,02,17,895.00

| | | | |
|---|---|---|---|
| | **Add 1% for Price Adjustment A=** | | 35,46,461.00 |
| 16. | Electric Power Supply and distribution | L.S. | 80,00,000.00 |
| 17. | Rain Water Harvesting | L.S. | 5,00,000.00 |
| 18. | Greeneries and Landscaping on the south side and on Bengre village side | L.S. | 25,00,000.00 |
| 19. | Fire Extinguishers Fire Hydrants and other equipment | L.S. | 5,00,000.00 |
| 20 | Drainage and Sewerage including effluent treatment plants toxic waste reception shed, spent oil reception shed, bilge water oil separators, storms water drains and cross drainage works. | L.S. | [illegible],00,00,000.00 |
| 21. | For CRZ clearance Environment Clearance, Miscellaneous and others | L.S. | 12,53,188.00 |
| | | **Total** | **49,50,00,000.00** |

ಮಾನ್ಯ ರಾಷ್ಟ್ರೀಯ ಹಸಿರು ಪೀಠದ ಅಂತಿಮ ಆದೇಶವನ್ನು ಪಾಲಿಸಿ ವರದಿ ಮಾಡಬೇಕಾಗಿರುವುದರಿಂದ ಮತ್ತು ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತದ ಮೂಲ ಅಂದಾಜಿನಲ್ಲಿ ಪ್ರಸ್ತಾಪಿಸಲಾಗಿದ್ದ ಕಂಪೋನೆಂಟ್‌ಗಳಲ್ಲಿ ಬಂದರನ್ನು ಕಾರ್ಯಾಚರಣೆಗೆ ತರಲು ಭಾಗಶಃ ಪೂರ್ಣಗೊಂಡಿರುವ ಮತ್ತು ಬಾಕಿ ಉಳಿದಿರುವ ಅಗತ್ಯ ಕಂಪೋನೆಂಟ್‌ಗಳ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿ ಕರ್ನಾಟಕ ಜಲಸಾರಿಗೆ ಮಂಡಳಿರವರು ತಯಾರಿಸಿ ಮೀನುಗಾರಿಕೆ ನಿರ್ದೇಶಕರ ಮುಖಾಂತರ ಸಲ್ಲಿಸಿದ ರೂ.49.50 ಕೋಟಿಗಳ ಮೊತ್ತದ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-52 ಮೀಇಯೋ 2023, ಬೆಂಗಳೂರು**
**ದಿನಾಂಕ: 06-10-2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತದ ವಿಸ್ತರಣಾ ಯೋಜನೆಯ ಉಳಿಕೆ ಕಾಮಗಾರಿಗಳನ್ನು ರೂ.49.50 ಕೋಟಿ (ನಲವತ್ತೊಂಬತ್ತು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ)ಗಳ ಮೊತ್ತದಲ್ಲಿ ಕೈಗೊಳ್ಳುವ ಸಂಬಂಧ ಕರ್ನಾಟಕ ಜಲಸಾರಿಗೆ ಮಂಡಳಿ ರವರು ತಯಾರಿಸಿರುವ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಸದರಿ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 4405-ಮೀನುಗಾರಿಕೆ ಮೇಲಿನ ಬಂಡವಾಳ ವೆಚ್ಚ - 00 - 104- ಮೀನುಗಾರಿಕೆ ಬಂದರುಗಳು ಮತ್ತು ಇಳಿದಾಣ

K
5

ಸೌಕರ್ಯಗಳು-0-02. ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳ ನವೀಕರಣ-386-ನಿರ್ಮಾಣ ಯೋಜನೆಯಡಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/421/ವೆಚ್ಚ-4/2020, ದಿನಾಂಕ: 01-09-2023 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹಾಗೂ ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ: 459/2023 ರ ಅನುಮೋದನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

K.S. Chinnubai 06/10/2023
(ಚಿನ್ನೂಬಾಯಿ ಕೆ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಜಂಟಿ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು (ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ 459 / 2023)
5. ಮೀನುಗಾರಿಕೆ ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, 3ನೇ ಮಹಡಿ, ವಿ.ವಿ.ಗೋಪುರ, ಬೆಂಗಳೂರು.
6. ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೈತಖೋಲ್, ಕಾರವಾರ.
7. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಬೈತಖೋಲ್ ಕಾರವಾರ.
8. ಸಂಬಂಧಪಟ್ಟ ಜಂಟಿ ನಿರ್ದೇಶಕರುಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
9. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
10. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
11. ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4) ವಿಧಾನಸೌಧ, ಬೆಂಗಳೂರು.
13. ಕಂಟ್ರೋಲ್ ರೂಮ್-ಕಂ-24x7ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ ಇಲಾಖೆ.
14. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ / https://ahf.karnataka.gov.in

**ಪ್ರತಿಯನ್ನು**

1. ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೇಂದ್ರ ಪುರಸ್ಕೃತ ಯೋಜನೆಯಡಿ ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕಾ ಬಂದರು ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:-
1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 33013-8/2010- ಎಫ್ ವೈ (ಹೆಚ್), ದಿನಾಂಕ: 13-08-2018.
2) ಆದೇಶ ಸಂಖ್ಯೆ: ಪಸಂಮೀ/184/ಮೀಇಯೋ/2013, ದಿನಾಂಕ: 20-02-2020.
3) ಆದೇಶ ಸಂಖ್ಯೆ: ಪಸಂಮೀ/184/ಮೀಇಯೋ/2013, ದಿನಾಂಕ: 10-07-2020.
4) ಆದೇಶ ಸಂಖ್ಯೆ: ಪಸಂಮೀ/184/ಮೀಇಯೋ/2013, ದಿನಾಂಕ: 24-08-2020.
5) ಪತ್ರ ಸಂಖ್ಯೆ: ಪಸಂಮೀ/26/ಮೀಇಯೋ/2021, ದಿನಾಂಕ: 03-03-2021.
6) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಪತ್ರ ಸಂಖ್ಯೆ: ಮೀನಿ/ಬಂದರು/111/2010, ದಿನಾಂಕ: 17-03-2021.
7) ಆದೇಶ ಸಂಖ್ಯೆ: ಪಸಂಮೀ/26/ಮೀಇಯೋ/2021, ದಿನಾಂಕ: 23-06-2022.
8) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಪತ್ರ ಸಂಖ್ಯೆ: ಮೀನಿ/ಟೆಕ್ಂ/ಬಂದರು/83/2020, ದಿನಾಂಕ: 16-02-2024 ಮತ್ತು 12-07-2024.

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಕೇಂದ್ರ ಸರ್ಕಾರದ ಪತ್ರದಲ್ಲಿ, ಉಡುಪಿ ಜಿಲ್ಲೆಯ **ಹೆಜಮಾಡಿ ಕೋಡಿಯಲ್ಲಿ** ಮೀನುಗಾರಿಕೆ ಬಂದರನ್ನು ರೂ.138.60 **ಕೋಟಿ** ಅಂದಾಜು ವೆಚ್ಚದಲ್ಲಿ **ಕೈಗೊಳ್ಳಲು ಆಡಳಿತಾತ್ಮಕ** ಮಂಜೂರಾತಿ ನೀಡಿ ತನ್ನ ಪಾಲಿನ ಪ್ರಥಮ ಕಂತಿನ ಅನುದಾನವಾಗಿ ರೂ.13.86 **ಕೋಟಿಗಳನ್ನು ಬಿಡುಗಡೆ** ಮಾಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಆದೇಶದಲ್ಲಿ, ಉಡುಪಿ ಜಿಲ್ಲೆಯ ಹೆಜಮಾಡಿಕೋಡಿಯಲ್ಲಿ ಮೀನುಗಾರಿಕೆ ಬಂದರು ನಿರ್ಮಾಣ ಕಾಮಗಾರಿಯನ್ನು ಕೇಂದ್ರದ ಪಾಲು ರೂ.69.30 **ಕೋಟಿಗಳನ್ನು** ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯದ ಪಾಲು ರೂ.111.54 **ಕೋಟಿ** (ಈಗಾಗಲೇ ಅನುಮೋದನೆ ನೀಡಿರುವ ಮೊತ್ತ ರೂ.69.30 **ಕೋಟಿ** + ಪರಿಷ್ಕೃತ ಅಂದಾಜಿನಂತೆ ಹೆಚ್ಚುವರಿ ಮೊತ್ತ ರೂ.29.00 **ಕೋಟಿ** + ಭೂಸ್ವಾಧೀನ ಪ್ರಕ್ರಿಯೆ ಮೊತ್ತ ರೂ.13.24 ಕೋಟಿ) ಗಳನ್ನು ರಾಜ್ಯ ಸರ್ಕಾರದಿಂದ ಹೀಗೆ ಒಟ್ಟು ರೂ.180.84 **ಕೋಟಿಗಳ** ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

-2-

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ, ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕೆ ಬಂದರು ನಿರ್ಮಾಣಕ್ಕಾಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾಪಿಸಿರುವ ರೂ.1324.00 ಲಕ್ಷಗಳನ್ನು 2020-21 ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 4405-00-103-6-01 ರಡಿ ಒದಗಿಸಿರುವ ಅನುದಾನದಿಂದ ಬಿಡುಗಡೆ ಮಾಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಆದೇಶದಲ್ಲಿ, ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕೆ ಬಂದರು ನಿರ್ಮಾಣಕ್ಕಾಗಿ ಖಾಸಗಿ ಜಮೀನನ್ನು ಮೀನುಗಾರಿಕೆ ಇಲಾಖೆಯಿಂದಲೆ ಖರೀದಿಸಲು ಲೆಕ್ಕ ಶೀರ್ಷಿಕೆ 4405-00-103-6-01(139)ರಡಿಯಲ್ಲಿ ಬಿಡುಗಡೆ ಆಗಿರುವ ಮೊತ್ತ ರೂ 13.24 ಕೋಟಿಗಳನ್ನು ಪೇಯೀಸ್ ರಸೀದಿ ಮೂಲಕ ರಾಜ್ಯ ಹುಜೂರ್ ಖಜಾನೆಯಿಂದ ಸೆಳೆದು ಮೀನುಗಾರಿಕೆ ನಿರ್ದೇಶಕರ ಖಾತೆಗೆ ಜಮೆ ಮಾಡಲು ಅನುಮತಿ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಪತ್ರದಲ್ಲಿ, ಕೇಂದ್ರ ಪುರಸ್ಕೃತ ಯೋಜನೆಯಡಿ ಗಂಗೊಳ್ಳಿ ಮೀನುಗಾರಿಕೆ ಬಂದರಿನಲ್ಲಿ ಬ್ರೇಕ್ ವಾಟರ್ (2ನೇ ಹಂತದ ಅಭಿವೃದ್ಧಿ) ನಿರ್ಮಾಣ ಕಾಮಗಾರಿಗೆ ರಾಜ್ಯದ ಪಾಲಿನ ಅನುದಾನ ರೂ.500.00 ಲಕ್ಷಗಳು ಹಾಗೂ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಅಳ್ವೆಕೋಡಿ-ತೆಂಗಿನಗುಂಡಿ ಮೀನುಗಾರಿಕೆ ಇಳಿದಾಣ ಕೇಂದ್ರಗಳ ಅಭಿವೃದ್ಧಿಗಾಗಿ ಬ್ರೇಕ್ ವಾಟರ್ ನಿರ್ಮಾಣ ಕೈಗೊಳ್ಳಲು ರಾಜ್ಯ ಮತ್ತು ಕೇಂದ್ರದ ಪಾಲಿನ ಅನುದಾನ ರೂ.294.00 ಲಕ್ಷಗಳು ಸೇರಿ ಒಟ್ಟಾರೆಯಾಗಿ ರೂ.794.00 ಲಕ್ಷಗಳನ್ನು, ಈಗಾಗಲೇ ಕೇಂದ್ರ ಪುರಸ್ಕೃತ ಯೋಜನೆಯಡಿ ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕೆ ಬಂದರು ನಿರ್ಮಾಣಕ್ಕಾಗಿ ಬಿಡುಗಡೆಯಾಗಿರುವ ರೂ.1324.00 ಲಕ್ಷಗಳಿಂದ ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ ಸದರಿ ಬಂದರು ನಿರ್ಮಾಣಕ್ಕಾಗಿ ಅಗತ್ಯವಿರುವ ಜಮೀನಿನ ಸ್ವಾಧೀನ ಪ್ರಕ್ರಿಯೆಗೆ ಬಿಡುಗಡೆ ಮಾಡಲಾಗಿರುವ ರೂ.13.24 ಕೋಟಿಗಳ ಅನುದಾನದಲ್ಲಿ ಶೇ.10ರಷ್ಟು ಅಂದರೆ ರೂ.2.113 ಕೋಟಿಗಳನ್ನು ಭೂಸ್ವಾಧೀನಾಧಿಕಾರಿ ಮತ್ತು ಸಹಾಯಕ ಕಮೀಷನರ್, ಕುಂದಾಪುರರವರಿಗೆ ಪಾವತಿಸಲಾಗಿರುತ್ತದೆಂದು ತಿಳಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (7)ರಲ್ಲಿ ಓದಲಾದ ಆದೇಶದಲ್ಲಿ, ಕೇಂದ್ರ ಪುರಸ್ಕೃತ ಯೋಜನೆಯಡಿ ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕಾ ಬಂದರು ನಿರ್ಮಾಣ ಕಾಮಗಾರಿ ಕೈಗೊಳ್ಳುವ ಸಂಬಂಧದ ರೂ.188.73 ಕೋಟಿ (ಅಗತ್ಯವಿರುವ ಜಮೀನಿನ ಭೂಸ್ವಾಧೀನಕ್ಕಾಗಿ ಮೀಸಲಿಟ್ಟಿದ್ದ ರಾಜ್ಯದ ಪಾಲು ರೂ 13.24 ಕೋಟಿಗಳಿಂದ ರೂ.21.13 ಕೋಟಿಗಳಿಗೆ ಹೆಚ್ಚಳವಾಗಿದ್ದರಿಂದ) ಗಳ ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (8) ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರಗಳಲ್ಲಿ, ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ರೂ. 180.84 ಕೋಟಿ ಅಂದಾಜು ವೆಚ್ಚದಲ್ಲಿ ಬಂದರು ನಿರ್ಮಾಣ ಮಾಡಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು, ಆನಂತರ ಭೂಸ್ವಾಧೀನ ಹೆಚ್ಚುವರಿ ಮೊತ್ತ ಸೇರಿ ರೂ.188.73 ಕೋಟಿಗಳ ಯೋಜನಾ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುವುದರಿಂದ, ರಾಜ್ಯ ಸರ್ಕಾರದ ಪಾಲನ್ನು ರೂ.119.43 ಕೋಟಿಗಳಿಗೆ ಹೆಚ್ಚಿಸಲಾಗಿದೆ. ಸದರಿ ಮೀನುಗಾರಿಕೆ ಬಂದರು ನಿರ್ಮಾಣ ಕಾಮಗಾರಿಯನ್ನು ಬಂದರು ಮತ್ತು ಮೀನುಗಾರಿಕೆ ವಿಭಾಗ ಇವರಿಗೆ ವಹಿಸಲಾಗಿದೆ.

-3-



COF-TECHCHAP 83/2020-JD MARINE-DIRECTORATE OF FISHERIES (Computer No. 326263)

ಕೇಂದ್ರ ಸರ್ಕಾರದ ಮೀನುಗಾರಿಕೆ ಇಲಾಖೆಯಿಂದ ರೂ.22.52 ಕೋಟಿ ಮತ್ತು ಸಾಗರಮಾಲಾ ಯೋಜನೆಯಿಂದ ರೂ.13.86 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ. ಈ ಕಾಮಗಾರಿಯಲ್ಲಿ ಸುಮಾರು ರೂ.124.15 ಕೋಟಿಗಳ (ಜಿ.ಎಸ್.ಟಿ. ಸೇರಿ) ಪ್ರಗತಿಯನ್ನು ಸಾಧಿಸಲಾಗಿದೆ. ಸದರಿ ಬಂದರು ನಿರ್ಮಾಣ ಕಾಮಗಾರಿಗಳಲ್ಲಿ ಬ್ರೇಕವಾಟರ್ ನಿರ್ಮಾಣ, ಹೂಳೆತ್ತುವುದು, ಜೆಟ್ಟಿ ನಿರ್ಮಾಣ, ಸ್ಟೋನ್ ಬಂಡ್ ಸ್ಲೋಪಿಂಗ್ ಹಾರ್ಡ್ ನಿರ್ಮಾಣ, ರಸ್ತೆ ನಿರ್ಮಾಣ, 17 ಸಂಖ್ಯೆಯ ಕಟ್ಟಡಗಳು, ಕಾಂಪೌಂಡ್ ವಾಲ್ ಇತ್ಯಾದಿ ಕಾಮಗಾರಿಗಳನ್ನು ಒಳಗೊಂಡಿರುತ್ತದೆ. ಸುಮಾರು ಶೇ.65ರಷ್ಟು ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ನೂತನ ಮೀನುಗಾರಿಕೆ ಬಂದರು ನಿರ್ಮಾಣಕ್ಕೆ ಹೆಜಮಾಡಿ ಗ್ರಾಮದ ಸ.ನಂ.129/1 ಹಾಗೂ ಇತರೆ ಸರ್ವೇ ನಂಬರ್ ಗಳಲ್ಲಿರುವ 14 ಸ್ಥಳಗಳ ಒಟ್ಟು 12.20 ಎಕ್ರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಜಮೀನಿನ ನೇರ ಖರೀದಿಗೆ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ನಿಗದಿಪಡಿಸಿರುವ ರೂ.13.12 ಕೋಟಿ ಮೊತ್ತವನ್ನು ರೂ.21,12,89,118.00ಗಳಿಗೆ ಮೇಲೆ ಕ್ರಮ ಸಂಖ್ಯೆ (7)ರಲ್ಲಿ ಓದಲಾದ ಆದೇಶದಲ್ಲಿ ಪರಿಷ್ಕರಿಸಿ ಆದೇಶಿಸಲಾದಂತೆ ಸದರಿ ಮೊತ್ತವನ್ನು ಈಗಾಗಲೇ ಸಹಾಯಕ ಆಯುಕ್ತರು, ಕುಂದಾಪುರ ಇವರಲ್ಲಿ ಠೇವಣಿ ಇಡಲಾಗಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರು ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ನೂತನ ಮೀನುಗಾರಿಕೆ ಬಂದರು ನಿರ್ಮಾಣಕ್ಕೆ ಹೆಜಮಾಡಿ ಗ್ರಾಮದ ಸ.ನಂ.129/1 ಹಾಗೂ ಇತರೆ ಸರ್ವೇ ನಂಬರ್ ಗಳಲ್ಲಿರುವ 14 ಸ್ಥಳಗಳ ಒಟ್ಟು 12.20 ಎಕ್ರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಸ್ತುತ ಅವಾರ್ಡ್ ಮೊತ್ತ ರೂ. 41,52,78,416.00 ಕ್ಕೆ ಅನುಮೋದನೆ ನೀಡಿರುತ್ತಾರೆ.

ಮುಂದುವರೆದು, ಅನುಮೋದನೆಯಾಗಿರುವ ಅವಾರ್ಡ್ ಮೊತ್ತವನ್ನು ಅಂತಿಮವಾಗಿ ಘೋಷಣೆ ಮಾಡಿ ಭೂಸ್ವಾಧೀನ ಕಾಯ್ದೆಯ ಕಲಂ 37(2)ರಂತೆ ನೋಟೀಸ್ ನೀಡಿ ಪರಿಹಾರ ಪಾವತಿಸಲು ಕ್ರಮ ಕೈಗೊಳ್ಳಲು ಹಾಗೂ ವ್ಯತ್ಯಾಸದ ಮೊತ್ತವನ್ನು ಠೇವಣಿ ಇಡುವಂತೆ ಭೂಸ್ವಾಧೀನಾಧಿಕಾರಿಗಳು ಮತ್ತು ಸಹಾಯಕ ಕಮೀಷನರ್, ಕುಂದಾಪುರ ರವರ ಕೋರಿಕೆಯಂತೆ ಮೀನುಗಾರಿಕೆ ಜಂಟಿ ನಿರ್ದೇಶಕರು, ಉಡುಪಿ ರವರು ಅವಾರ್ಡ್ ಮೊತ್ತದ ವ್ಯತ್ಯಾಸದ ಮೊತ್ತ ರೂ.20,39,89,298.00 ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸಿರುತ್ತಾರೆ.

ಹೆಜಮಾಡಿ ಕೋಡಿ ಮೀನುಗಾರಿಕೆ ಬಂದರು ಅಭಿವೃದ್ಧಿ ಕಾಮಗಾರಿಗೆ ಪರಿಸರ ಇಲಾಖೆಯಿಂದ ಸಂಖ್ಯೆ: ಅಪಜೀ 30 ಸಿಆರ್‌ಝಡ್ 2016, ದಿನಾಂಕ: 17-02-2016 ರಲ್ಲಿ ದಿನಾಂಕ: 17-02-2016 ರಿಂದ 17-02-2023 ರವರೆಗೆ ಕರಾವಳಿ ನಿಯಂತ್ರಣ ವಲಯ ನಿರಾಕ್ಷೇಪಣಾ ಪತ್ರವನ್ನು ಪಡೆಯಲಾಗಿದ್ದು, ಸದರಿ ನಿರಾಕ್ಷೇಪಣಾ ಪತ್ರದ ಅವಧಿಯು 07 ವರ್ಷಗಳಾಗಿದ್ದರಿಂದ ಪುನಃ ಪರಿಸರ ಇಲಾಖೆಯಿಂದ ಸಂಖ್ಯೆ: ಅಪಜೀ 81 ಸಿಆರ್‌ಝಡ್ 2023, ದಿನಾಂಕ: 05-12-2023 ರಲ್ಲಿ ಸದರಿ ಕಾಮಗಾರಿಗೆ ನೀಡಲಾಗಿದ್ದ ಅವಧಿಯನ್ನು ಮೂರು ವರ್ಷಗಳ ಅವಧಿಗೆ ಅಂದರೆ ದಿನಾಂಕ 17-02-2026 ರವರೆಗೆ ಕರಾವಳಿ ನಿಯಂತ್ರಣ ವಲಯ ನಿರಾಕ್ಷೇಪಣಾ ಪತ್ರವನ್ನು ವಿಸ್ತರಿಸಲಾಗಿರುತ್ತದೆ. ಆದುದರಿಂದ, ದಿನಾಂಕ: 17-02-2026 ರೊಳಗೆ ಸದರಿ ಕಾಮಗಾರಿಗೆ ಅವಶ್ಯವಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿ ಕಾಮಗಾರಿಯನ್ನು ಸಹ ಮುಕ್ತಾಯಗೊಳಿಸಬೇಕಿರುತ್ತದೆ.

-4-

ಆದ್ದರಿಂದ, ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ನೂತನ ಮೀನುಗಾರಿಕೆ ಬಂದರು ನಿರ್ಮಾಣಕ್ಕೆ, ಹೆಜಮಾಡಿ ಗ್ರಾಮದ ಸ.ನಂ.129/1 ಹಾಗೂ ಇತರೆ ಸರ್ವೇ ನಂಬರ್ ಗಳಲ್ಲಿರುವ 14 ಸ್ಥಳಗಳ ಒಟ್ಟು 12.20 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ರೂ.41,52,78,416.00 ಗಳನ್ನು ಒಟ್ಟು ಅವಾರ್ಡ್ ಮೊತ್ತವೆಂದು ಅನುಮೋದಿಸಿರುವುದರಿಂದ, ಈ ಹಿಂದೆ ಭೂಸ್ವಾಧೀನ ಪ್ರಕ್ರಿಯೆಗೆ ಅನುಮೋದಿಸಿದ ಮೊತ್ತ ರೂ 21,12,89,118.00 ಗಳನ್ನು ರೂ.41,52,78,416.00 ಗಳಿಗೆ ಪರಿಷ್ಕರಿಸಲು ಹಾಗೂ ವ್ಯತ್ಯಾಸದ ಮೊತ್ತ ರೂ.20,39,89,298.00 ಗಳನ್ನು ಬಿಡುಗಡೆ ಮಾಡಲು ಮತ್ತು ಸದರಿ ಮೊತ್ತವನ್ನು ಸಹಾಯಕ ಆಯುಕ್ತರು, ಕುಂದಾಪುರರವರಿಗೆ ಪಾವತಿಸಲು ಅನುಮತಿ ನೀಡುವಂತೆ ಮೀನುಗಾರಿಕೆ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-26 ಮೀಇಯೋ 2021, ಬೆಂಗಳೂರು ದಿನಾಂಕ: 13-01-2025</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೇಂದ್ರ ಪುರಸ್ಕೃತ ಯೋಜನೆಯಡಿ ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕಾ ಬಂದರು ನಿರ್ಮಾಣ ಕಾಮಗಾರಿ ಕೈಗೊಳ್ಳಲು ಮೂಲ ಅಂದಾಜು ಮೊತ್ತ ರೂ.188.73 ಕೋಟಿಗಳಿಂದ ರೂ.209.13 ಕೋಟಿಗಳಿಗೆ (ಅಗತ್ಯವಿರುವ ಜಮೀನಿನ ಭೂಸ್ವಾಧೀನಕ್ಕಾಗಿ ಮೀಸಲಿಟ್ಟಿದ್ದ ರಾಜ್ಯದ ಪಾಲು ರೂ.21.13 ಕೋಟಿಗಳಿಂದ ರೂ.41.53 ಕೋಟಿಗಳಿಗೆ ಹೆಚ್ಚಳವಾಗಿದ್ದರಿಂದ)) ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ರೂ.209.13 ಕೋಟಿ ((ಎರಡುನೂರ ಒಂಭತ್ತು ಕೋಟಿ ಹದಿಮೂರು ಲಕ್ಷ ರೂಪಾಯಿಗಳು ಮಾತ್ರ)ಗಳ ಪರಿಷ್ಕೃತ ಅಂದಾಜು ಮೊತ್ತಕ್ಕೆ ಈ ಕೆಳಕಂಡ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

1) ಸದರಿ ಪರಿಷ್ಕೃತ ಅಂದಾಜು ಮೊತ್ತವು ಮತ್ತೊಮ್ಮೆ ಪರಿಷ್ಕೃತಗೊಳ್ಳತಕ್ಕದ್ದಲ್ಲ.
2) ಕೇಂದ್ರ ಸರ್ಕಾರ ವಿಧಿಸಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಕಾಮಗಾರಿಯನ್ನು ಕೈಗೊಳ್ಳುವುದು.
3) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ಅನ್ನು ಅನುಸರಿಸಿ ನಿಯಮಾನುಸಾರ ಕಾಮಗಾರಿಗಳನ್ನು ಕೈಗೊಳ್ಳುವುದು.

ಮೇಲಿನಂತೆ ಬಿಡುಗಡೆಗೊಳಿಸಿದ ಅನುದಾನವನ್ನು ನಿಯಮಾನುಸಾರ ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡು ಕಡ್ಡಾಯವಾಗಿ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು ಮತ್ತು ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಖ2/ಪಿಎಂಯು/92/2015-16, ದಿನಾಂಕ:27-03-2018ರ ಕ್ರಮ ಸಂಖ್ಯೆ 01 ರಿಂದ 04 ರಲ್ಲಿ ಸೂಚಿಸಿರುವಂತೆ ಅನುಷ್ಠಾನಗೊಳಿಸತಕ್ಕದ್ದು.

ಸದರಿ ಕಾಮಗಾರಿಯ ಅನುಷ್ಠಾನಕ್ಕಾಗಿ ಅಗತ್ಯವಿರುವ ಮೊತ್ತವನ್ನು ಪ್ರಗತಿಗೆ ಅನುಗುಣವಾಗಿ 2024-2025ನೇ ಸಾಲಿನ ಲೆಕ್ಕ ಶೀರ್ಷಿಕೆ 4405-00-104-0-02-386 (ಮೀನುಗಾರಿಕೆ ಬಂದರುಗಳು, ಇಳಿದಾಣ ಕೇಂದ್ರಗಳ ನವೀಕರಣ ಮತ್ತು ಹೂಳೆತ್ತುವ ಕಾರ್ಯಕ್ರಮ-ನಿರ್ಮಾಣ) ರಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

-5-



File No. DOF-TECHCHAP/83/2020-JD MARINE-DIRECTORATE OF FISHERIES (Computer No. 3282...)

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ. ಆಇ/59/ವೆಚ್ಚ-4/2021 ದಿನಾಂಕ 26-11-2024 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹಾಗೂ ಸಚಿವ ಸಂಪುಟ ಟಿಪ್ಪಣಿ ಸಂಖ್ಯೆ: ಸಿ/02/2025 ದಿನಾಂಕ: 02-01-2025ರ ಅನುಮೋದನೆಯಂತೆ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

K.S. Chinnubai 13/1/2025
(ಚಿನ್ನೂಬಾಯಿ ಕೆ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ, ಉಡುಪಿ.
5. ಸರ್ಕಾರದ ಜಂಟಿ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು (ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ: 2/2025)
6. ಮೀನುಗಾರಿಕೆ ನಿರ್ದೇಶಕರು, 3ನೇ ಮಹಡಿ, ಪೋಡಿಯಂ ಬ್ಲಾಕ್, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು.
7. ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೈತಖೋಲ, ಕಾರವಾರ.
8. ಮೀನುಗಾರಿಕೆ ಜಂಟಿ ನಿರ್ದೇಶಕರು, ಉಡುಪಿ.
9. ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ ಮತ್ತು ಪಸಂಮೀ ಇಲಾಖೆ.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
12. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
13. ಸಂಬಂಧಪಟ್ಟವರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
14. ಕಂಟ್ರೋಲ್ ರೂಮ್-ಕಂ-24x7 ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ ಇಲಾಖೆ.
15. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.

**<u>ಪ್ರತಿಯನ್ನು</u>**

1. ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು.



... TECH/HAR/82/2020-JD MARINE-DIRECTORATE OF FISHERIES (Computer No. 1262...)

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2024-25 ನೇ ಸಾಲಿನ ಆಯವ್ಯಯ ಕಂಡಿಕೆ 58 ರಲ್ಲಿ ಘೋಷಿಸಲಾದಂತೆ ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ಸುಸಜ್ಜಿತ ಮೀನುಗಾರಿಕೆ ಹೊರಬಂದರು ನಿರ್ಮಾಣ ಯೋಜನೆಗೆ ಅನುಮತಿ ನೀಡುವ ಕುರಿತು.

**ಓದಲಾಗಿದೆ:-**
1. **2024-25ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-58 (iv)**
2. **ಆರ್ಥಿಕ ಇಲಾಖೆಯ ಆಯವ್ಯಯ ಸಲಹಾ ಟಿಪ್ಪಣಿ ಸಂಖ್ಯೆ:ಆಇ 27 ವೆಚ್ಚ**-4/2024, ದಿನಾಂಕ:16.04.2024.
3. ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-89 ಮೀಇಯೋ 2024, ಬೆಂಗಳೂರು ದಿನಾಂಕ:14-06-2024.
4. ಮೀನುಗಾರಿಕೆ ನಿರ್ದೇಶಕರ ಏಕ ಕಡತ ಪತ್ರ ಸಂಖ್ಯೆ:, DoF-TECHO-HAR/15/2024, ದಿನಾಂಕ:08-11-2024.

******

**ಪ್ರಸ್ತಾವನೆ:**

**ಮೇಲೆ** ಕ್ರಮ ಸಂಖ್ಯೆ (1) ರಲ್ಲಿ ಓದಲಾದ 2024-25 ನೇ ಸಾಲಿನ **ಆಯವ್ಯಯ ಕಂಡಿಕೆ** 58 (iv) ರಲ್ಲಿ ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ಮೀನುಗಾರಿಕೆ ಹೊರ ಬಂದರು ನಿರ್ಮಾಣ ಎಂಬ ಯೋಜನೆಯನ್ನು ಘೋಷಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆರ್ಥಿಕ ಇಲಾಖೆಯ ಆಯವ್ಯಯ ಸಲಹಾ **ಟಿಪ್ಪಣಿಯಲ್ಲಿ** 2024-25 ನೇ ಸಾಲಿನ ಆಯವ್ಯಯ **ಭಾಷಣದ** ಕಂಡಿಕೆ-58 (iv) ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ಸುಸಜ್ಜಿತ ಮೀನುಗಾರಿಕೆ ಹೊರ ಬಂದರು ನಿರ್ಮಾಣ ಕಾಮಗಾರಿಯು ಹೊಸ ಯೋಜನೆಯಾಗಿದ್ದು, ಸದರಿ ಕಾರ್ಯಕ್ರಮ/ಯೋಜನೆಯನ್ನು ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲು ಕ್ರಮವಹಿಸುವುದು ಎಂದು ತಿಳಿಸಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಸರ್ಕಾರದ ಆದೇಶದಲ್ಲಿ 2024-25 ನೇ ಸಾಲಿನ ಆಯವ್ಯಯ **ಕಂಡಿಕೆ**-58 (iv) "ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ಸುಸಜ್ಜಿತ ಮೀನುಗಾರಿಕೆ ಹೊರ ಬಂದರು ನಿರ್ಮಾಣ" ಯೋಜನೆಯನ್ನು ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯ ಸಹಯೋಗದೊಂದಿಗೆ ಕೈಗೊಳ್ಳಲು ಹಾಗೂ ಪ್ರಸ್ತಾಪಿತ ಕಾಮಗಾರಿಯು ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡು, ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ, ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮಾಡಲಾಗುವುದೆಂಬ ಷರತ್ತಿಗೊಳಪಟ್ಟು ಪ್ರಸ್ತಾಪಿತ ಕಾಮಗಾರಿಗೆ ತಾತ್ವಿಕ (in principle) ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (4) ರ ಮೀನುಗಾರಿಕೆ ನಿರ್ದೇಶಕರ ಏಕ ಕಡತದ ಪತ್ರದಲ್ಲಿ ರಾಜ್ಯದಲ್ಲಿ 11 ಮೀನುಗಾರಿಕೆ ಬಂದರುಗಳು ಮತ್ತು 13 ಮೀನು ಇಳಿದಾಣ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

....2

ಕೇಂದ್ರ ನೆರವಿನ ಮೀನುಗಾರಿಕೆ ಬಂದರು/ಇಳಿದಾಣ ಕೇಂದ್ರಗಳ ನಿರ್ಮಾಣ ಯೋಜನೆಯಡಿ ರಾಜ್ಯದ ಮೀನುಗಾರಿಕೆ ಬಂದರು / ಇಳಿದಾಣ ಕೇಂದ್ರಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿದರೂ ಸಹ ಇತ್ತೀಚಿನ ಮೀನುಗಾರಿಕೆ ಚಟುವಟಿಕೆಗಳನ್ನು ಗಣನೆಗೆ ತೆಗೆದುಕೊಂಡಾಗ ಇನ್ನೂ ಹೆಚ್ಚಿನ ಮೀನುಗಾರಿಕೆ ಬಂದರುಗಳ / ಇಳಿದಾಣಗಳ ಅಭಿವೃದ್ಧಿಗೆ ಬೇಡಿಕೆ ಇರುತ್ತದೆ. ಕಡಲ ಮೀನುಗಾರಿಕೆ ಪ್ರೋತ್ಸಾಹಿಸಲು ಮೂಲಭೂತ ಸೌಕರ್ಯಗಳಾದ ಮೀನುಗಾರಿಕೆ ಬಂದರುಗಳು ಮತ್ತು ಇಳಿದಾಣ ಕೇಂದ್ರಗಳನ್ನು ನಿರ್ಮಿಸುವ ಹೊಣೆಗಾರಿಕೆ ರಾಜ್ಯ ಸರ್ಕಾರದ್ದಾಗಿರುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮುರುಡೇಶ್ವರ ಪ್ರದೇಶದಲ್ಲಿ ಬಹಳ ವರ್ಷಗಳ ಹಿಂದಿನಿಂದಲೂ ಮೀನುಗಾರರು ಸಾಂಪ್ರದಾಯಿಕ ಮೀನುಗಾರಿಕೆ ನಡೆಸುತ್ತಿದ್ದು, ಮೀನು ಇಳಿಸುವಿಕೆಗೆ ಇಲ್ಲಿ ಯಾವುದೇ ರೀತಿಯ ಸೌಲಭ್ಯವಿರುವುದಿಲ್ಲ. ಈ ವಿಷಯ ಮನಗಂಡು 2018-19 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-71 ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ಬಂದರು ನಿರ್ಮಿಸಲು ಅವಶ್ಯ ಪೂರ್ವಭಾವಿ ಅಧ್ಯಯನವನ್ನು ಕೈಗೊಳ್ಳಲು ರೂ.1.00 ಕೋಟಿಗಳನ್ನು ಒದಗಿಸಿ, ಅವಶ್ಯ ಪೂರ್ವಭಾವಿ ಅಧ್ಯಯನವನ್ನು ರೂ.1.00ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 60 ಮೀಇಯೋ 2018, ದಿನಾಂಕ:18.08.2018 ರಲ್ಲಿ ತಾತ್ವಿಕ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಆದುದರಿಂದ, ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ಮೀನುಗಾರಿಕೆ ಚಟುವಟಿಕೆಯಲ್ಲಿ ತೊಡಗಿರುವ ಸುಮಾರು 165 ಯಾಂತ್ರೀಕೃತ ಮತ್ತು 460 ನಾಡದೋಣಿಗಳ ಸುರಕ್ಷಿತ ಇಳಿದಾಣಕ್ಕೆ ಮೀನುಗಾರಿಕೆ ಬಂದರು ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳುವುದು ಅತೀ ಅವಶ್ಯವಾಗಿರುತ್ತದೆ ಎಂದು ಮೀನುಗಾರಿಕೆ ನಿರ್ದೇಶಕರು ತಿಳಿಸಿರುತ್ತಾರೆ.

ಸದರಿ ಕಾಮಗಾರಿಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 4405-00-104-0-02-ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳ ನವೀಕರಣ-386-ಪ್ರಧಾನ ಕಾಮಗಾರಿಗಳು ಯೋಜನೆಯಡಿ ಭರಿಸಬಹುದಾಗಿದೆ ಎಂದು ಮೀನುಗಾರಿಕೆ ನಿರ್ದೇಶಕರು ತಿಳಿಸಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-89 ಮೀಇಯೋ 2024, ಬೆಂಗಳೂರು</u>**
**<u>ದಿನಾಂಕ:11-03-2025</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2024-25 ನೇ ಸಾಲಿನಲ್ಲಿ ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ಸುಸಜ್ಜಿತ ಮೀನುಗಾರಿಕೆ ಹೊರಬಂದರು ನಿರ್ಮಾಣ ಕಾಮಗಾರಿಯನ್ನು ರೂ.398.50 ಕೋಟಿಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಮುಂದುವರೆದು, ಸದರಿ ಯೋಜನೆಯ ಅನುಷ್ಠಾನಕ್ಕೆ 1/3 ಭಾಗ (ರೂ.132.83 ಕೋಟಿ (ಒಂದು ನೂರ ಮೂವತ್ತೆರಡು ಕೋಟಿ ಎಂಬತ್ತೂರು ಲಕ್ಷ ರೂಪಾಯಿಗಳು ಮಾತ್ರ) ಗಳ ಅನುದಾನವನ್ನು ಒದಗಿಸಿ ಮುರುಡೇಶ್ವರ ಹೊರ ಬಂದರು ಕಾಮಗಾರಿಗೆ ಟೆಂಡರ್ ಕರೆಯಲು ಅನುಮತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 221 ವೆಚ್ಚ-4/2024, ದಿನಾಂಕ:28-01-2025 ರನ್ವಯ ಹಾಗೂ ಸಚಿವ ಸಂಪುಟದ ಪ್ರಕರಣ ಸಂಖ್ಯೆ:ಸಸಂಶಾ(ಸಿ).17/2025, ದಿನಾಂಕ:20.02.2025 ರ ನಿರ್ಣಯದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

K.S. Chinnubai 11/3/2025
(ಚಿನ್ನುಬಾಯಿ ಕೆ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ನಿರ್ದೇಶಕರು (ಪಿಎಫ್ ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
6. ಸರ್ಕಾರದ ಜಂಟಿ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು (ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ: ಸಸಂಶಾ(ಸಿ).17/2025)
7. ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರು, ಮೀನುಗಾರಿಕೆ ಇಲಾಖೆ (ಮೀನುಗಾರಿಕೆ ನಿರ್ದೇಶಕರ ಮುಖಾಂತರ)
8. ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
9. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ ಮತ್ತು ಪಸಂಮೀ ಇಲಾಖೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
11. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
12. ಸಂಬಂಧಪಟ್ಟವರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
13. ಕಂಟ್ರೋಲ್ ರೂಮ್-ಕಂ-24x7 ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ ಇಲಾಖೆ.
14. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.
15. https://ahf.karnataka.gov.in.

**ಪ್ರತಿಯನ್ನು**

1. ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಸಹಾಯಕರು/ ಸರ್ಕಾರದ ಜಂಟಿ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಹಾಲಿ ಇರುವ ಮೀನುಗಾರಿಕೆ ಬಂದರುಗಳ ಆಧುನೀಕರಣ ಹಾಗೂ ಮೀನುಗಾರಿಕೆ ಬಂದರು ಮತ್ತು ಮೀನುಗಾರಿಕೆ ಇಳಿದಾಣ ಕೇಂದ್ರಗಳಲ್ಲಿ ನಿರ್ವಹಣಾ ಹೂಳೆತ್ತುವಿಕೆ ಕಾಮಗಾರಿಗಳನ್ನು ಒಟ್ಟು ಮೊತ್ತ ರೂ.8457.77 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:-**
1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:J-0102/74/2023-FYC, ದಿನಾಂಕ:10-01-2024
2. ಮೀನುಗಾರಿಕೆ ನಿರ್ದೇಶಕರ ಏಕ ಕಡತ ಸಂಖ್ಯೆ:DOF-TECHOHAR/74/2022, ದಿನಾಂಕ:30-08-2024.

******

**ಪ್ರಸ್ತಾವನೆ:**

ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯನ್ನು ಕೇಂದ್ರ ಸರ್ಕಾರವು 2020-21ನೇ ಸಾಲಿನಿಂದ ಪ್ರಾರಂಭಿಸಿದ್ದು, ಸದರಿ ಯೋಜನೆಯ ಪ್ರಮುಖ ಉದ್ದೇಶಗಳು ಮೀನು ಉತ್ಪಾದನೆಯನ್ನು ಹೆಚ್ಚಿಸುವುದು, ಹೊಸ ತಂತ್ರಜ್ಞಾನವನ್ನು ಅಳವಡಿಸುವುದು, ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು ಹಾಗೂ ಮೀನುಗಾರರ ಕಲ್ಯಾಣ ಮಾಡುವುದು. ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಪಡಿಸುವ ಯೋಜನೆಯಡಿ ಹಾಲಿ ಇರುವ ಮೀನುಗಾರಿಕೆ ಬಂದರುಗಳಲ್ಲಿ ಮಂಗಳೂರು, ಮಲ್ಪೆ ಮತ್ತು ಗಂಗೊಳ್ಳಿ ಮೀನುಗಾರಿಕೆ ಬಂದರುಗಳ ಆಧುನೀಕರಣ ಹಾಗೂ ಅಮದಳ್ಳಿ, ಹಾರವಾಡ ಮತ್ತು ಬೇಲಿಕೇರಿ ಹಾಗೂ ತದಡಿ ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳಲ್ಲಿ ನಿರ್ವಹಣಾ ಹೂಳೆತ್ತುವಿಕೆ ಕಾಮಗಾರಿಗಳಿಗೆ ಅನುಮೋದನೆ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಕೇಂದ್ರ ಸರ್ಕಾರದ ಪತ್ರದಲ್ಲಿ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಹಾಲಿ ಇರುವ ಮೀನುಗಾರಿಕೆ ಬಂದರುಗಳ ಆಧುನೀಕರಣ ಹಾಗೂ ಮೀನುಗಾರಿಕೆ ಬಂದರು ಮತ್ತು ಮೀನುಗಾರಿಕೆ ಇಳಿದಾಣ ಕೇಂದ್ರಗಳಲ್ಲಿ ನಿರ್ವಹಣಾ ಹೂಳೆತ್ತುವಿಕೆ ಕಾಮಗಾರಿಗಳನ್ನು ಒಟ್ಟು ಮೊತ್ತ ರೂ.8457.77 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ. ಸದರಿ ಕಾಮಗಾರಿಗಳಿಗೆ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಇರುವ ಹಂಚಿಕೆ ಮಾದರಿ ಕೇಂದ್ರದ ಪಾಲು ಶೇ.60 ರಷ್ಟು (ರೂ.5038.05 ಲಕ್ಷ) ಹಾಗೂ ರಾಜ್ಯದ ಪಾಲು ಶೇ.40 ರಷ್ಟು (ರೂ.3419.72ಲಕ್ಷ) ಅನುದಾನವನ್ನು ಭರಿಸಲು ಅನುಮೋದನೆ ನೀಡಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಒದಲಾದ ನಿರ್ದೇಶಕರ ಏಕ ಕಡತದ ಪತ್ರದಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾದ ಕಾಮಗಾರಿಗಳ ವಿವರಗಳನ್ನು ನಿರ್ದೇಶಕರು ಕೆಳಕಂಡಂತೆ ಸಲ್ಲಿಸಿರುತ್ತಾರೆ.

| Sl No | Name of the work | District | Total Project Cost (Rs. In lakhs) | GOI Share 60% | State Govt. Share 40% | Project completion Period |
|---|---|---|---|---|---|---|
| 1 | **Modernization Fishing Harbour** | | | | | |
| 1.1 | Modernization of Mangalore Fishing Harbour | Dhakshina Kannada | 3,747.10 | 2,248.26 | 1,498.84 | 12 Months |
| 1.2 | Modernization of Malpe Fishing Harbour | Udupi | 1,252.00 | 751.20 | 500.80 | 12 Months |
| 1.3 | Modernization of Ganglolli Fishing Harbour | Udupi | 2,218.00 | 1,330.80 | 887.20 | 12 Months |
| 2 | **Maintenance dredging of fishing harbours and fish landing centres** | | | | | |
| 2.1 | Dredging at Amdalli Fishing harbour | Uttara Kannada | 561.00 | 300.00 | 261.00 | 12 Months |
| 2.2 | Dredging at Belikere and Harawada Fishing harbour | Uttara Kannada | 414.08 | 248.44 | 165.64 | 12 Months |
| 2.3 | Dredging at Tadadi Fishing harbour | Uttara Kannada | 265.59 | 159.35 | 106.24 | 12 Months |
| | **Total** | | **8,457.77** | **5,038.05** | **3,419.72** | |

ರಾಜ್ಯದಲ್ಲಿ 11 ಮೀನುಗಾರಿಕೆ ಬಂದರುಗಳು ಹಾಗೂ 15 ಮೀನುಗಾರಿಕೆ ಇಳಿದಾಣ ಕೇಂದ್ರಗಳಿರುತ್ತದೆ ಈ ಪೈಕಿ ಮಂಗಳೂರು, ಮಲ್ಪೆ ಮತ್ತು ಗಂಗೊಳ್ಳಿ ಬಹಳ ಪ್ರಮುಖವಾದ ಬಂದರುಗಳಾಗಿದ್ದು, ಈ ಬಂದರುಗಳಲ್ಲಿ ಹೆಚ್ಚಿನ ಮೀನುಗಾರಿಕೆ ಚಟುವಟಿಕೆಗಳು ನಡೆಯುತ್ತಿದೆ. ಸದರಿ ಬಂದರುಗಳನ್ನು ನಿರ್ಮಿಸಿ ಬಹಳ ವರ್ಷಗಳಾಗಿರುತ್ತದೆ. ಸದರಿ ಬಂದರುಗಳನ್ನು ನವೀಕರಿಸುವುದು ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ಈ 3 ಬಂದರುಗಳ ಆಧುನೀಕರಣ ಮಾಡುವುದು ಅಗತ್ಯವಾಗಿರುತ್ತದೆ.

ಕರಾವಳಿ ಜಿಲ್ಲೆಗಳಲ್ಲಿನ ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳಲ್ಲಿ ಹೂಳು ತುಂಬಿದ್ದು, ಮೀನುಗಾರಿಕೆ ದೋಣಿಗಳ ದೈನಂದಿನ ಚಲನವಲನಕ್ಕೆ ಅಡ್ಡಿಯಾಗಿರುತ್ತದೆ. ಮೀನುಗಾರಿಕೆ ದೋಣಿಗಳ ಸುಗಮವಾದ ಚಲನವಲನಕ್ಕೆ ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳಲ್ಲಿ ನಿರ್ವಹಣೆ ಭಾಗವಾಗಿ ಕಾಲಕಾಲಕ್ಕೆ ಹೂಳೆತ್ತುವುದು ಅವಶ್ಯ. ಆದರೆ, ಅಮದಳ್ಳಿ, ಬೇಲಿಕೇರಿ - ಹಾರವಾಡ ಮತ್ತು ತದಡಿ ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳಲ್ಲಿ ನಿರ್ವಹಣಾ ಹೂಳೆತ್ತುವಿಕೆ ಕೈಗೊಳ್ಳದೆ ಮೀನುಗಾರಿಕೆ ದೋಣಿಗಳ ಚಲನವಲನಕ್ಕೆ ತುಂಬಾ ತೊಂದರೆಯಾಗಿದ್ದು, ಹಲವಾರು ಬಾರಿ ಅವಘಡಗಳು ಸಂಭವಿಸಿರುತ್ತದೆ. ಆದುದರಿಂದ ಸದರಿ ಬಂದರುಗಳಲ್ಲಿ ಹೂಳೆತ್ತುವ ಕಾಮಗಾರಿಗಳನ್ನು ಕೈಗೊಳ್ಳುವುದು ಅತಿ ಅವಶ್ಯವಾಗಿರುತ್ತದೆ

ಮೀನುಗಾರರ ಹಿತ ದೃಷ್ಟಿಯಿಂದ ಮಂಗಳೂರು, ಮಲ್ಪೆ ಮತ್ತು ಗಂಗೊಳ್ಳಿ ಬಹಳ ಪ್ರಮುಖವಾದ ಬಂದರುಗಳಾಗಿದ್ದು, ಈ ಬಂದರುಗಳ ಆಧುನೀಕರಣ ಅವಶ್ಯವಾಗಿರುವುದರಿಂದ ಹಾಗೂ ಆಮದಳ್ಳಿ, ಬೇಲಿಕೇರಿ -ಹಾರವಾಡ ಮತ್ತು ತದಡಿ ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳಲ್ಲಿ ನಿರ್ವಹಣಾ ಹೂಳೆತ್ತುವಿಕೆ ಕೈಗೊಳ್ಳುವುದು ಅಗತ್ಯವಾಗಿರುವುದರಿಂದ ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದಿಂದ ಅನುಮೋದನೆ ನೀಡಿರುವುದರಿಂದ ಈ ಕಾಮಗಾರಿಗಳಿಗೆ ರಾಜ್ಯ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವುದು ಅವಶ್ಯವಾಗಿರುತ್ತದೆ.

ಸದರಿ ಕಾಮಗಾರಿ/ಯೋಜನೆಯನ್ನು ಪ್ರಾರಂಭಿಸುವ ಮುನ್ನ ಅಗತ್ಯ ಅಧ್ಯಯನ ಕೈಗೊಳ್ಳಬೇಕಾಗಿರುವುದರಿಂದ ಹಾಗೂ ಸದರಿ ಯೋಜನೆಯನ್ನು 12 ತಿಂಗಳುಗಳಲ್ಲಿ ಪೂರ್ಣಗೊಳಿಸಬೇಕಾಗಿರುವುದರಿಂದ ಸದರಿ ಯೋಜನೆಗೆ ಒಳಪಟ್ಟಂತೆ ಅವಶ್ಯವಿರುವ ಅಧ್ಯಯನವನ್ನು ಕರ್ನಾಟಕ ಜಲ ಸಾರಿಗೆ ಮಂಡಳಿರವರಿಂದ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಂದಾಜು ಪಟ್ಟಿಗಳನ್ನು ಪಡೆದು ಅಧ್ಯಯನ ಕೈಗೊಳ್ಳಲು ಸೂಕ್ತ ಕ್ರಮ ವಹಿಸಲಾಗುತ್ತಿದೆ ಎಂದು ನಿರ್ದೇಶಕರು ತಿಳಿಸಿರುತ್ತಾರೆ.

ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಹಾಲಿ ಇರುವ ಮೀನುಗಾರಿಕೆ ಬಂದರುಗಳ ಕಾರ್ಯಕ್ರಮದಡಿ ಮಂಗಳೂರು, ಮಲ್ಪೆ ಮತ್ತು ಗಂಗೊಳ್ಳಿ ಬಂದರುಗಳ ಆಧುನೀಕರಣ ಹಾಗೂ ಆಮದಳ್ಳಿ, ಬೇಲಿಕೇರಿ-ಹಾರವಾಡ ಮತ್ತು ತದಡಿ ಬಂದರು/ಇಳಿದಾಣ ಕೇಂದ್ರಗಳಲ್ಲಿ ಹೂಳೆತ್ತುವ ಕಾಮಗಾರಿಗಳನ್ನು ಕರ್ನಾಟಕ ಜಲಸಾರಿಗೆ ಮಂಡಳಿ ಇವರ ಮೂಲಕ ಒಟ್ಟು ಮೊತ್ತ ರೂ.8457.77 ಲಕ್ಷಗಳ (ಕೇಂದ್ರದ ಪಾಲು ರೂ.5038.05 ಲಕ್ಷ ಮತ್ತು ರಾಜ್ಯದ ಪಾಲು ರೂ.3419.72 ಲಕ್ಷ) ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವಂತೆ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-60 ಮೀಇಯೋ 2024, ಬೆಂಗಳೂರು, ದಿನಾಂಕ:13.01.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಹಾಲಿ ಇರುವ ಮೀನುಗಾರಿಕೆ ಬಂದರುಗಳ ಆಧುನೀಕರಣ ಹಾಗೂ ಮೀನುಗಾರಿಕೆ ಬಂದರು ಮತ್ತು ಮೀನುಗಾರಿಕೆ ಇಳಿದಾಣ ಕೇಂದ್ರಗಳಲ್ಲಿ ನಿರ್ವಹಣಾ ಹೂಳೆತ್ತುವಿಕೆ ಕಾಮಗಾರಿಗಳನ್ನು ಕೇಂದ್ರದ ಪಾಲು ರೂ.5038.05 ಲಕ್ಷ ಹಾಗೂ ರಾಜ್ಯದ ಪಾಲು ರೂ.3419.72 ಲಕ್ಷ ಹೀಗೆ ಒಟ್ಟು ಮೊತ್ತ ರೂ.8457.77 ಲಕ್ಷಗಳ (ಎಂಟು ಸಾವಿರದ ನಾಲ್ಕು ನೂರ ಐವತ್ತೇಳು ಲಕ್ಷದ ಎಪ್ಪತ್ತೇಳು ಸಾವಿರ ರೂಪಾಯಿಗಳು ಮಾತ್ರ) ವೆಚ್ಚದಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿ ಇವರ ಮೂಲಕ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಸದರಿ ಮೊತ್ತವನ್ನು ಲೆಕ್ಕಶೀರ್ಷಿಕೆ 4405-00-103-6-01-139/ 4405-00-103-6-02-139 ರಡಿ ಅನುದಾನದಿಂದ ಭರಿಸತಕ್ಕದ್ದು.

ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಹಾಲಿ ಇರುವ ಮೀನುಗಾರಿಕೆ ಬಂದರುಗಳ ಆಧುನೀಕರಣ ಹಾಗೂ ಮೀನುಗಾರಿಕೆ ಬಂದರು ಮತ್ತು ಮೀನುಗಾರಿಕೆ ಇಳಿದಾಣ ಕೇಂದ್ರಗಳಲ್ಲಿ ನಿರ್ವಹಣಾ ಹೂಳೆತ್ತುವಿಕೆ ಕಾಮಗಾರಿಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಮೀನುಗಾರಿಕೆ ಇಲಾಖೆಯ ಅನುಮೋದನೆ ಪಡೆಯತಕ್ಕದ್ದು ಹಾಗೂ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲಾಗಿದೆಯೇ ಎಂದು ಖಚಿತಪಡಿಸಿಕೊಂಡು ನಂತರ ಕಾಮಗಾರಿಯನ್ನು ಕೈಗೊಳ್ಳುವುದು.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000ನ್ನು ಅನುಸರಿಸಿ ನಿಯಮಾನುಸಾರ ಕಾಮಗಾರಿಗಳನ್ನು ಕೈಗೊಳ್ಳುವುದು.

ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/332/ವೆಚ್ಚ-4/2024 ದಿನಾಂಕ:06.11.2024 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹಾಗೂ ಸಚಿವ ಸಂಪುಟ ಟಿಪ್ಪಣಿ ಸಂಖ್ಯೆ:03/2025 ರ, ದಿನಾಂಕ:02.01.2025 ರಲ್ಲಿನ ಅನುಮೋದನೆಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಚಿನ್ನಮ್ಮಬಾಯಿ.ಕೆ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3. ಮೀನುಗಾರಿಕೆ ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು.
4. ಸರ್ಕಾರದ ಅವರ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು (ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ 3/2025)
5. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರ್ನಾಟಕ ಜಲಸಾರಿಗೆ ಮಂಡಳಿ ಖನಿಜಭವನ, ಬೆಂಗಳೂರು.
6. ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ ಮತ್ತು ಪಸಂಮೀ ಇಲಾಖೆ.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
9. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.
11. ಸಂಬಂಧಪಟ್ಟವರುಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ
12. ಕಂಟ್ರೋಲ್ ರೂಮ್-ಕಂ-24x7 ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ ಇಲಾಖೆ.
13. http://ahf.karnataka.gov.in

**ಪ್ರತಿಯನ್ನು**

1. ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಸಹಾಯಕರು / ಸರ್ಕಾರದ ಜಂಟಿ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು.

**ಕರ್ನಾಟಕ ಸರ್ಕಾರ**

ಸಂಖ್ಯೆ:ಪಸಂಮೀ/128/ಮೀಇಯೋ/2025

ಕರ್ನಾಟಕ ಸರ್ಕಾರದ ಸಚಿವಾಲಯ
ಡಾ|| ಬಿ.ಆರ್.ಅಂಬೇಡ್ಕರ್ ವೀದಿ
ವಿಕಾಸಸೌಧ
ಬೆಂಗಳೂರು, ದಿನಾಂಕ:06-11-2025

**ಇವರಿಂದ:**
ಸರ್ಕಾರದ ಕಾರ್ಯದರ್ಶಿಗಳು,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

**ಇವರಿಗೆ:**
ನಿರ್ದೇಶಕರು,
ಮೀನುಗಾರಿಕೆ ನಿರ್ದೇಶನಾಲಯ,
ವಿವಿ ಗೋಪುರ, ಬೆಂಗಳೂರು.

ಮಾನ್ಯರೇ

**ವಿಷಯ:** 2025-26 ನೇ ಸಾಲಿನ ಲೆಕ್ಕಶೀರ್ಷಿಕೆ 4405-00-104-0-02-ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳ ನವೀಕರಣ-386- ಪ್ರಧಾನ ಕಾಮಗಾರಿಗಳು ಯೋಜನೆಯಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ.

**ಉಲ್ಲೇಖ:**
1. ತಮ್ಮ ಏಕ ಕಡತದ ಪತ್ರ ಸಂಖ್ಯೆ: DOF-TECHOHAR/13/2025, ದಿನಾಂಕ:19-05-2025 & ದಿನಾಂಕ: 02-07-2025.
2. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 618 ವೆಚ್ಚ-4/2025, ದಿನಾಂಕ:27-10-2025.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ರಲ್ಲಿ ಸಲ್ಲಿಸಲಾದ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಉಲ್ಲೇಖಿತ (2) ರಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಅಭಿಪ್ರಾಯವನ್ನು ಇದರೊಂದಿಗೆ ಲಗತ್ತಿಸುತ್ತಾ, ಮುಂದಿನ ಸೂಕ್ತ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

K.S. Chinnubai

**(ಚಿನ್ನೂಬಾಯಿ.ಕೆ.ಎಸ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

ಆಇ 618 ವೆಚ್ಚ-4/2025
AHF/128/FSFS/2025
DOF-TECH0HAR/13/2025

ಆರ್ಥಿಕ ಇಲಾಖೆ (ವೆಚ್ಚ-4)
ದಿನಾಂಕ: 27-10-2025

ಆಡಳಿತ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಈ ಕೆಳಕಂಡ 19 ಕಾಮಗಾರಿಗಳನ್ನು (ರಾಜಸ್ವ ಲೆ.ಶೀ. 2405-00-001-0-01-200ರಡಿ 06 ಕಾಮಗಾರಿಗಳು ಹಾಗೂ ಬಂಡವಾಳ ಲೆ.ಶೀ.4405-00-104-0-02-386 ರಡಿ 13 ಕಾಮಗಾರಿಗಳನ್ನು) ಒಟ್ಟಾರೆಯಾಗಿ ರೂ.464.06 ಲಕ್ಷಗಳಲ್ಲಿ ಕೈಗೊಳ್ಳಲು ಪೂರಕ ಅಂದಾಜು-2ರಲ್ಲಿ ಹೆಚ್ಚುವರಿಯಾಗಿ ಅನುದಾನ ಒದಗಿಸಲು ಕ್ರಮ ವಹಿಸಲಾಗುವುದು ಎಂದು ಆಡಳಿತ ಇಲಾಖೆಗೆ ತಿಳಿಸಿದೆ.

ರಾಜಸ್ವ - ಲೆ.ಶೀ. 2405-00-001-0-01-200

| ಕ್ರ ಸಂ. | ಪ್ರಸ್ತಾವಿತ ಕಾಮಗಾರಿಗಳ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | Marine Geo Technical Investigation of Breakwater for Development of outer Harbour at Murudeshwar. Uttar Kannada District. | 28.50 |
| 2 | Marine Geo Technical Investigation of Jetty and Buildings for Development of outer Harbour at Murudeshwar. Uttar Karnada District. | 28.50 |
| 3 | Carrying out Bathymetric Survey at Koderi. Byndoor Taluk of Udupi District | 4.50 |
| 4 | Carrying out Recent beach Profile Survey +2M to -2M towards North & South Side of Existing Break water & Recent Topographic Detail of Existing Structures for the Extension of Breakwater in Koderi, Byndoor Taluk of Udupi District. | 4.96 |
| 5 | Conducting Bathymetric Survey of Boat basin 1st, 2nd, 3rd stage & River Chanel of Malpe Fishing at Malpe in Udupi Taluk, Udupi District. | 5.00 |
| 6 | Charrying out Bathymetric Survey at Gangolli, Fishing Harbour at Kundapur Taluk of Udupi District. | 3.60 |
| | **Total** | **75.06** |

ಬಂಡವಾಳ - ಲೆ.ಶೀ. 4405-00-104-0-02-386

| ಕ್ರ ಸಂ. | ಪ್ರಸ್ತಾವಿತ ಕಾಮಗಾರಿಗಳ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಅಳ್ವೆಕೋಡಿ ಮೀನುಗಾರಿಕೆ ಇಳಿದಾಣ ಕೇಂದ್ರದಲ್ಲಿ ಮಹಿಳೆಯರ ಶೌಚಾಲಯ ನಿರ್ಮಾಣ | 75.00 |
| 2 | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮಾವಿನಕುರ್ವೆ ಬಂದರಿನಲ್ಲಿ ಮಹಿಳಾ ವಿಶ್ರಾಂತಿ ಕೊಠಡಿ ನಿರ್ಮಾಣ ಕಾಮಗಾರಿ | 82.00 |

| | | |
|---|---|---|
| 3 | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ತೆಂಗಿನಗುಂಡಿ ಮೀನುಗಾರಿಕೆ ಇಳಿದಾಣ ಕೇಂದ್ರದಲ್ಲಿ ಬಲೆ ನೇಯುವ ಶೆಡ್ ಬದಲಾಯಿಸಿ ಅಂಗಡಿ ಮಳಿಗೆಗಳನ್ನು ನಿರ್ಮಿಸುವ ಕಾಮಗಾರಿ | 46.00 |
| 4 | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮಾವಿನಕುರ್ವೆ ಮೀನುಗಾರಿಕೆ ಬಂದರಿನಲ್ಲಿ ಕಾಂಕ್ರೀಟ್ ವಾಲ್ ನಿರ್ಮಾಣ ಕಾಮಗಾರಿ | 15.00 |
| 5 | ಭಟ್ಕಳ ತಾಲ್ಲೂಕಿನಲ್ಲಿ ಅಳ್ವೆಕೋಡಿ ಮೀನುಗಾರಿಕೆ ಇಳಿದಾಣ ಕೇಂದ್ರದಲ್ಲಿ ಬೋಟುಗಳನ್ನು ನಿಲ್ಲಿಸಲು ಇರುವ ಬೋಲಾರ್ಡ್ ದುರಸ್ತಿ ಕಾಮಗಾರಿ | 25.00 |
| 6 | Maintenance of North side Breakwater at Gangolli, Kundapura Taluk, Udupi Dist. | 10.00 |
| 7 | Maintenance of South side Breakwater at Koderi Byndoor Taluk. Udupi Dist. | 10.00 |
| 8 | Maintenance of North Side Breakwater at Koderi Byndoor Taluk. Udupi Dist. | 10.00 |
| 9 | ಉಡುಪಿ ಜಿಲ್ಲೆ ಕೋಡಿ ಬೆಂಗ್ರೆ ಬಂದರಿನ ಹರಾಜು ಮಳಿಗೆ ಪ್ರಾಂಗಣದ ಮೇಲ್ಛಾವಣಿ ದುರಸ್ತಿ ಮಾಡಿ ಹೊಸದಾಗಿ ಅಳವಡಿಸುವ ಕಾಮಗಾರಿ | 59.00 |
| 10 | ಕಾರವಾರ ತಾಲ್ಲೂಕಿನ ಬೈತ್‌ಖೋಲ್ ಮೀನುಗಾರಿಕಾ ಬಂದರಿನ ಬೋಟುಗಳ ನಿಲುಗಡೆಗಾಗಿ ಬೋಟ್‌ನ ಹಾಂಗಗಳನ್ನು ಕಟ್ಟಲು ಬೋಲಾರ್ಡ್‌ಗಳನ್ನು ಅಳವಡಿಸುವುದು. | 20.00 |
| 11 | ಕಾರವಾರ ತಾಲ್ಲೂಕಿನ ಬೈತ್‌ಖೋಲ್ ಮೀನುಗಾರಿಕಾ ಬಂದರಿನ ಸುತ್ತ ಮುತ್ತ ಮಳೆನೀರು ಹರಿದು ಹೋಗುವಂತೆ ಮಳೆನೀರು ಚರಂಡಿ ನಿರ್ಮಾಣ | 20.00 |
| 12 | ಕಾರವಾರ ತಾಲ್ಲೂಕಿನ ಬೈತ್‌ಖೋಲ್ ಮೀನುಗಾರಿಕಾ ಬಂದರಿನಲ್ಲಿರುವ ಹಳೆಯ ಮಹಿಳಾ ವಿಶ್ರಾಂತಿ ಗೃಹ ದುರಸ್ತಿ | 12.00 |
| 13 | ಅಂಕೋಲಾ ತಾಲ್ಲೂಕಿನ ಬೇಲೇಕೇರಿ ಮೀನುಗಾರಿಕಾ ಬಂದರಿನಲ್ಲಿ ಮೀನುಗಾರಿಕಾ ಬೋಟುಗಳನ್ನು ನಿಲ್ಲಿಸಲು ಕಟ್ಟುವ ಕಾಂಕ್ರೀಟ್ ಬೋಲಾರ್ಡ್ (Bollards) ದುರಸ್ತಿ ಕಾಮಗಾರಿ | 5.00 |
| | ಒಟ್ಟು | **389.00** |

(ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರ್ಥಿಕ ಇಲಾಖೆ ಇವರಿಂದ ಅನುಮೋದಿತ)

Digitally signed by
MAYAPPA H SANGANNAWAR
Date 27-10-2025 11:52:55

(ಮಾಯಪ್ಪ ಹೆಚ್. ಸಂಗಣ್ಣವರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ(ವೆಚ್ಚ-4&5)

ಸರ್ಕಾರದ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಉಡುಪಿ ಜಿಲ್ಲೆಯ ಮರವಂತೆಯಲ್ಲಿ ರೂ.85.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಮೀನುಗಾರಿಕೆ ಬಂದರು ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:- ಪತ್ರ ಸಂಖ್ಯೆ: ಮೀನಿ/38/ಪಂವಾಯೋ/2020.
ದಿನಾಂಕ: 24-04-2020.

*****

## ಪ್ರಸ್ತಾವನೆ:

2020-21 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ- 70 ರಲ್ಲಿ ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಮರವಂತೆಯಲ್ಲಿ ರೂ.85.00 ಕೋಟಿ ಅಂದಾಜು ವೆಚ್ಚದಲ್ಲಿ ಮೀನುಗಾರಿಕೆ ಹೊರಬಂದರಿನ 2 ನೇ [illegible] ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಲಾಗಿದೆ ಎಂದು ಘೋಷಿಸಲಾಗಿ[illegible]

ಮೇಲೆ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರದಲ್ಲಿ, ಕರ್ನಾಟಕ ರಾಜ್ಯವು 320 ಕಿ.ಮೀ. ಉದ್ದದ ಕರಾವಳಿ ತೀರವನ್ನು ಹೊಂದಿದೆ [illegible] ಸಾಲಿನಲ್ಲಿ ರೂ.3933.00 ಕೋಟಿ ಮೌಲ್ಯದ 4.14 ಲಕ್ಷ ಮೆ.ಟನ್ [illegible] ಮೀನನ್ನು ಹಿಡುವಳಿ ಮಾಡಲಾಗಿದೆ. ರಾಜ್ಯದ ಕರಾವಳಿಯಲ್ಲಿ [illegible] ಸಂಖ್ಯೆಯ ಮೀನುಗಾರಿಕೆ ದೋಣಿಗಳಿವೆ. ಪ್ರಸ್ತುತ, ದೋಣಿಗಳ ಸುಗಮ ಚಾಲನೆಗಾಗಿ 8 ಮೀನುಗಾರಿಕೆ ಬಂದರುಗಳನ್ನು ಮತ್ತು 26 ಮೀನುಗಾರಿಕೆ ಇಳಿದಾಣ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. [illegible] ಮೀನುಗಾರಿಕೆ ಬಂದರುಗಳಲ್ಲಿ ಮೀನುಗಾರಿಕೆ ದೋಣಿಗಳ [illegible] ಮಾಡುವ ಹಾಗೂ ಮೀನು ಇಳಿಸಲು ನೈರ್ಮಲ್ಯಯುಕ್ತ ವಾತಾವರಣ ಕಲ್ಪಿಸುವ ಉದ್ದೇಶದಿಂದ ಯಾಂತ್ರೀಕೃತ ಹಾಗೂ ಮೋಟರೀಕೃತ ದೋಣಿಗಳಿಗಾಗಿ (Out Board Engine) ಮೀನುಗಾರಿಕೆ ಬಂದರು [illegible] ಮೀನುಗಾರಿಕೆ ಇಳಿದಾಣ ಕೇಂದ್ರಗಳನ್ನು ಅಭಿವೃದ್ಧಿಪಡಿಸುವ [illegible] ಅಗತ್ಯವಿರುತ್ತದೆ.

ಉಡುಪಿ ಜಿಲ್ಲೆಯ ಪಶ್ಚಿಮ ಕರಾವಳಿ ತೀರದಲ್ಲಿ ಮರವಂತೆ [illegible] ಪ್ರದೇಶದ ಜನರು ಮೀನುಗಾರಿಕೆಯಲ್ಲಿ ಹೆಚ್ಚಾಗಿ ತೊಡಗಿರುತ್ತಾರೆ. [illegible] ಮರವಂತೆ ಬಂದರಿನಲ್ಲಿ 2 ಅಲೆತಡೆಗೋಡೆಗಳು ಇದ್ದು, ಈ ಬಂದರಿನಲ್ಲಿ ವಿಶಾಲ ಪ್ರವೇಶವಿರುವುದರಿಂದ ಮೀನುಗಾರಿಕೆ ದೋಣಿಗಳನ್ನು ಮೀನುಗಾರರು ಬಂದರಿನ ಒಳಗೆ ನ್ಯಾವಿಗೇಟ್ ಮಾಡಲು ಕಷ್ಟಸಾಧ್ಯವಾಗುತ್ತಿದೆ. [illegible] ಮಂಗಳೂರು ಮೀನುಗಾರಿಕೆ ಬಂದರಿನಿಂದ ಸುಮಾರು 1501 [illegible] ಮೀನುಗಾರಿಕಾ ದೋಣಿಗಳನ್ನು ಉಪಯೋಗಿಸಿ ಮೀನುಗಾರರು [illegible]

ನಡೆಸುತ್ತಿದ್ದಾರೆ. ಹಾಗೆಯೇ, ಮಲ್ಪೆ ಮೀನುಗಾರಿಕೆ ಬಂದರಿನಲ್ಲಿ ಸುಮಾರು 2164 ಯಾಂತ್ರೀಕೃತ ಮೀನುಗಾರಿಕಾ ದೋಣಿಗಳನ್ನು ಉಪಯೋಗಿಸಿ ಮೀನುಗಾರರು ಮೀನುಗಾರಿಕೆ ನಡೆಸುತ್ತಿದ್ದಾರೆ. ಇದರಿಂದ, ಸದರಿ ಮೀನುಗಾರಿಕೆ ಬಂದರುಗಳಲ್ಲಿ ಇಕ್ಕಟ್ಟಿನ ಪ್ರದೇಶದಲ್ಲಿ ಮೀನುಗಾರಿಕೆ ದೋಣಿಗಳ ನಿಲುಗಡೆ ಮಾಡುತ್ತಿರುವುದರಿಂದ ದೋಣಿಗಳು ಹಾನಿಗೊಳಗಾಗುವ ಸಾಧ್ಯತೆ ಹೆಚ್ಚಿರುತ್ತದೆ. ಸ್ಥಳೀಯ ಮೀನುಗಾರರು ಮಂಗಳೂರು ಮತ್ತು ಮಲ್ಪೆ ಮೀನುಗಾರಿಕೆ ಬಂದರನ್ನು ಆಶ್ರಯಿಸಿದ್ದು, ಈ ಪ್ರದೇಶದಲ್ಲಿ ಮೀನುಗಾರಿಕೆ ಬಂದರನ್ನು ನಿರ್ಮಿಸುವಂತೆ ಹಲವು ವರ್ಷಗಳಿಂದ ಮನವಿ ಸಲ್ಲಿಸಿರುತ್ತಾರೆ.

ಉದ್ದೇಶಿತ ಹೊರಬಂದರು ಪೂರ್ಣಗೊಂಡಲ್ಲಿ ಮಂಗಳೂರು ಮತ್ತು ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ದಟ್ಟಣೆ ಕಡಿಮೆಯಾಗುತ್ತದೆ. ಹಾಗೆಯೇ ಸ್ಥಳೀಯ ಮೀನುಗಾರರಿಗೆ ಹಿಡಿದ ಮೀನಿಗೆ ಹೆಚ್ಚಿನ ಬೆಲೆ ದೊರೆಯುವುದಲ್ಲದೆ, ಮೀನನ್ನು ಶೀಘ್ರವಾಗಿ ಮಾರುಕಟ್ಟೆಗೆ ಸಾಗಿಸಲು ಸಹಾಯಕವಾಗಲಿದೆ. ಈ ನಿಟ್ಟಿನಲ್ಲಿ ಸುಗಮ ಪ್ರವೇಶಕ್ಕಾಗಿ ಹಾಗೂ ಅಲೆಗಳ ಅಬ್ಬರವನ್ನು ತಗ್ಗಿಸಲು ಮತ್ತು ಮೀನುಗಾರಿಕೆ ಚಟುವಟಿಗಳನ್ನು ಪ್ರೋತ್ಸಾಹಿಸಲು ಹೊರಬಂದರನ್ನು ಸ್ಥಾಪಿಸಲು ಉದ್ದೇಶಿಲಾಗಿರುತ್ತದೆ. ಈ ಸಂಬಂಧ ಮೊದಲ ಹಂತದಲ್ಲಿ ರೂ.45.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಆದರೆ, ತಾಂತ್ರಿಕ ಕಾರಣಗಳಿಂದ ಈ ಹೊರಬಂದರನ್ನು ಮೀನುಗಾರರು ಉಪಯೋಗಿಸಲು ಸಾಧ್ಯವಾಗುತ್ತಿಲ್ಲ.

2020-21 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-70 ರಲ್ಲಿ ಉಡುಪಿ ಜಿಲ್ಲೆಯ ಮರವಂತೆಯಲ್ಲಿ ರೂ.85.00 ಕೋಟಿ ಅಂದಾಜು ವೆಚ್ಚದಲ್ಲಿ ಮೀನುಗಾರಿಕೆ ಹೊರಬಂದರನ್ನು 2ನೇ ಹಂತದಲ್ಲಿ ನಿರ್ಮಿಸಲು ಉದ್ದೇಶಿಲಾಗಿದೆ. ಸದರಿ ಮರವಂತೆ ಬಂದರನ್ನು CWPRS ರವರು ಮಾದರಿ ಅಧ್ಯಯನದ ಆಧಾರದ ಮೇಲೆ ಹೊರಬಂದರಿನ 2 ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ ನಕ್ಷೆಯನ್ನು ತಯಾರಿಸಿ ಸಲ್ಲಿಸಿರುವುದಾಗಿ ತಿಳಿಸುತ್ತಾ, ಯೋಜನಾ ನಕ್ಷೆಯಲ್ಲಿ ಅಲೆತಡೆಗೋಡೆಯನ್ನು ದಕ್ಷಿಣಕ್ಕೆ 65 ಮೀಟರ್ ಹಾಗೂ ಉತ್ತರಕ್ಕೆ 560 ಮೀ ವಿಸ್ತರಿಸಲು ಪ್ರಸ್ತಾವಿಸಲಾಗಿರುತ್ತದೆ. ದಕ್ಷಿಣ ಭಾಗದ ಅಲೆತಡೆಗೋಡೆಯಲ್ಲಿ 6 ಟನ್ ತೂಕದ ಟೆಟ್ರಾಪಾಡ್ ಗಳನ್ನೂ ಹಾಗೂ ಉತ್ತರದಲ್ಲಿ 8 ಟನ್ ತೂಕದ ಟೆಟ್ರಾಪಾಡ್ ಗಳನ್ನೂ ಉಪಯೋಗಿಸಿ ನಿರ್ಮಿಸಲಾಗುವುದೆಂದು ತಿಳಿಸುತ್ತಾ, ಈ ಕಾಮಗಾರಿಗೆ ತಗಲುವ ರೂ .85.00 ಕೋಟಿ ವೆಚ್ಚದ ವಿವರಗಳು ಕೆಳಗಿನಂತಿದೆ.

| ಕ್ರ. ಸಂ. | ವಿವರ | ಮೊತ್ತ (ಕೋಟಿಗಳಲ್ಲಿ) |
|---|---|---|
| 1) | ಅಲೆತಡೆಗೋಡೆ ನಿರ್ಮಾಣ ವೆಚ್ಚ | 74.21 |
| 2) | ಜಿ . ಎಸ್ . ಟಿ @ 12% | 8.90 |
| 3) | ಪ್ರಾಥಮಿಕ ಕಾಮಗಾರಿ ಮತ್ತು CRZ clearance, EIA Study | 0.75 |
| 4) | ಇತರೆ ಖರ್ಚು | 1.14 |
| | ಒಟ್ಟು | 85.00 |

ಆದ್ದರಿಂದ, ಉಡುಪಿ ಜಿಲ್ಲೆಯ ಮರವಂತೆಯಲ್ಲಿ ಹೊರಬಂದರು ನಿರ್ಮಾಣದ 2 ನೇ ಹಂತದ ಕಾಮಗಾರಿಯನ್ನು ರೂ .85.00 ಕೋಟಿ ಅಂದಾಜು ವೆಚ್ಚದಲ್ಲಿ 2020-21 ನೇ ಸಾಲಿನಿಂದ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

<u>ಆದೇಶ ಸಂಖ್ಯೆ: ಪಸಂಮೀ ಇ-107 ಮೀಇಯೋ 2020, ಬೆಂಗಳೂರು ದಿನಾಂಕ:</u> 21.09.2020

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2020-21ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-70 ರಲ್ಲಿ ಘೋಷಿಸಿರುವ ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಮರವಂತೆಯಲ್ಲಿ ರೂ.85.00 ಕೋಟಿ (ಎಂಬತ್ತೈದು ಕೋಟಿ ರೂಪಾಯಿಗಳು ಮಾತ್ರ)ಗಳ ಅಂದಾಜು ವೆಚ್ಚದಲ್ಲಿ **ಮೀನುಗಾರಿಕೆ ಹೊರಬಂದರಿನ 2 ನೇ ಹಂತದ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.**

ಸದರಿ ವೆಚ್ಚವನ್ನು 2020-21ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 4405-ಮೀನುಗಾರಿಕೆ ಮೇಲಿನ ಬಂಡವಾಳ ವೆಚ್ಚ-00-104-ಮೀನುಗಾರಿಕೆ ಬಂದರು ಮತ್ತು ಇಳಿದಾಣ ಸೌಕರ್ಯಗಳು -0-02- ಮೀನುಗಾರಿಕೆ ಬಂದರುಗಳ ಮತ್ತು ಇಳಿದಾಣ ಕೇಂದ್ರಗಳ ನವೀಕರಣ-386-ನಿರ್ಮಾಣ ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/252/ವೆಚ್ಚ-4/2020, ದಿನಾಂಕ: 01-09-2020 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A. 21/9/2020
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

21/09/2020

ಇವರಿಗೆ

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.

3. ಸರ್ಕಾರದ ಕಾರ್ಯದರ್ಶಿ, ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ನಿರ್ದೇಶಕರು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ, ಉಡುಪಿ.
6. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು (ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ: 432/2020)
7. ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
8. ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೈತಖೋಲ, ಕಾರವಾರ.
9. ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
10. ಮೀನುಗಾರಿಕೆ ಉಪ ನಿರ್ದೇಶಕರು, ಉಡುಪಿ.
11. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ ಮತ್ತು ಪಸಂಮೀ ಇಲಾಖೆ.
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
13. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
14. ಸಂಬಂಧಪಟ್ಟವರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
15. ಮಾನ್ಯ ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
16. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.